ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 36-50
©*IIMRD*, Mysuru
IIMRD JOURNALS
www.iimrd.com

# ವೀರಶೈವ ಧರ್ಮ ಮತ್ತು ಜಗದ್ಗುರು ರೇವಣಸಿದ್ಧರು

**ಡಾ. ಎ. ಸಿ. ವಾಲಿ***
*ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಣ್ಣಿಗೇರಿ, ಧಾರವಾಡ

***ಸಾರಾಂಶ (Abstract)***

*ವೀರಶೈವ ಧರ್ಮ ಮತ್ತು ಜಗದ್ಗುರು ರೇವಣಸಿದ್ಧರು ಒಂದೇ ನಾಣ್ಯದ ಎರಡು ಮುಖಗಳು. ರೇವಣಸಿದ್ಧರು ರೇವಣಸಿದ್ಧರು ಕೇವಲ ಧರ್ಮವನ್ನು ಬೋಧಿಸಲಿಲ್ಲ ಸ್ವತಃ ಆಚರಿಸಿ ಅನುಷ್ಠಾನಕ್ಕೆ ತಂದು ಜಗದೋದ್ಧಾರ ಮಾಡಿದವರು ಮಾತ್ರವಲ್ಲದೆ ಜಗದಾದಿ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಧರ್ಮಕ್ಕೆ ಹೊಸ ಆಯಾಮ ನೀಡಿದವರು ಜಗದ್ಗುರು ರೇವಣಸಿದ್ಧರು. ಪ್ರಸ್ತುತ ಲೇಖನದಲ್ಲಿ ವೀರಶೈವ ಧರ್ಮದ ತಾತ್ವೀಕತೆ ಮತ್ತು ಜಗದ್ಗುರು ರೇವಣಸಿದ್ಧರ ಜೀವನ ಸಾಧನೆ-ಅವರ ಬೋಧನೆ ಮುಂತಾದವುಗಳನ್ನು ವಿಮರ್ಶಿಸಲಾಗಿದೆ.*

***ಮುಖ್ಯಪದಗಳು (Keywords)*:** ಜಗದ್ಗುರು ರೇವಣಸಿದ್ಧರು, ಪಂಚಾಚಾರ್ಯ, ಬಸವಾದಿ ಶರಣರು, ವೀರಶೈವ ಧರ್ಮ, ಶೈವಧರ್ಮ.

**ಪೀಠಿಕೆ**

ವೀರಶೈವವು ಶೈವಧರ್ಮದ ಸರ್ವಾಂಗೀಣ ವಿಕಸಿತ ರೂಪ. ವೀರಶೈವ ಹೇಗಿದ್ದಾನೆಂದು ಸಿದ್ಧರಾಮ "ಚತುರ್ವರ್ಣಾತೀತನೆ ವೀರಶೈವ"[1] ಎಂದರುಹಿದರೇ, "ಬತ್ತೀಸ ನೆಲೆಕಲೆಗಳ ಸದ್ಗುರು ಮುಖದಿಂದರಿದ, ಬಸವ ಮೊದಲಾದ ಸಮಸ್ತ ಗಣಂಗಳೆಲ್ಲಾ, ಪ್ರಥಮ ನಿರಾಭಾರಿ ವೀರಶೈವ ಸನ್ಮಾರ್ಗವಿಡಿದಾಚರಿಸಿದರು ನೋಡಾ[2]" ಎಂದ ಮಹಾದೇವಿ ಅಕ್ಕ ಇನ್ನೊಂದು ವಚನದಲ್ಲಿ ಬಸವಣ್ಣ ವೀರಶೈವಧರ್ಮದ ಸುಧಾರಕ ವಿನಃ ಸ್ಥಾಪಕನಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದು ಹೀಗಿದೆ: "ಈ ಪರಿಯಲ್ಲಿ ಬಯಲಾಗಿ ಹೋಗಬಾರದೆಂದು ನಮ್ಮ ಬಸವಣ್ಣನು, ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ, ವೀರಶೈವ ಮಾರ್ಗವನರುಪುವುದಕ್ಕೆ ಬಾವನ್ನ ವಿವರವನೊಳಗೊಂಡು ಚರಿಸಿದನೆಂತೆಂದಡೆ"[3] ಹೀಗಾಗಿ ಸ್ವಾಯಂಭುವಾಗಮ, ಸುಪ್ರಭೇದಾಗಮ ಮತ್ತು ವೀರಾಗಮೋತ್ತರ ಭಾಗಗಳಲ್ಲಿ ಉಲ್ಲೇಖಗೊಂಡಂತೆ ವೀರಶೈವ ಧರ್ಮಸ್ಥಾಪಕರು ಜಗದಾದಿ ಜಗದ್ಗುರು ರೇಣುಕಾದಿ ಪಂಚ ಆಚಾರ್ಯರೆನ್ನುವುದು ದಾಖಲೆ ಒದಗಿಸುತ್ತದೆ. ಸಮಸ್ತ ಮಾನವ ಕುಲಕೋಟಿಗೆ ಧರ್ಮಮಾರ್ಗ ತಿಳಿಸಲು 'ಸಿದ್ಧಾಂತ ಶಿಖಾಮಣಿ' ಎಂಬ ಧರ್ಮಗ್ರಂಥ ನೀಡಿ ಪಾವನಗೈದವರು ಪಂಚಾಚಾರ್ಯರು.

*Please cite this article as:* *ವಾಲಿ ಎ.ಸಿ. (2021).* ವೀರಶೈವ ಧರ್ಮ ಮತ್ತು ಜಗದ್ಗುರು ರೇವಣಸಿದ್ಧರು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರಿಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 36–50*

*ಶ್ರೀಮದ್ರೇವಣಸಿದ್ಧಸ್ಯ ಕುಲ್ಯಪಾಕಪುರೋತ್ತಮೇ ।*
*ಸೋಮೇಶಲಿಂಗಾಜ್ಜನನಮಾವಾಸಃ ಕದಲೀಪುರೇ//* [4]

ಜಗದ್ಗುರು ಆದಿರೇಣುಕರಿಂದ ಸ್ಥಾಪಿತವಾದ ಶ್ರೀಮದ್‌ರಂಭಾಪುರೀ ಪೀಠ ಪರಂಪರೆಯಲ್ಲಿ ಕ್ರಿ.ಶ. ಆರಂಭದಲ್ಲಿ ಶ್ರೀಮದ್ ರೇವಣಸಿದ್ಧರು ಕೊಲ್ಲಿಪಾಕಿ (ಆಂಧ್ರಪ್ರದೇಶ) ಸೋಮೇಶ್ವರಲಿಂಗದಲ್ಲಿ ಜನಿಸಿ ಬಾಳೆಹೊನ್ನೂರಿನ ಪೀಠವನ್ನು ಅಲಂಕರಿಸಿ ನೆಲೆಸಿದರು. ಈತ ಶ್ರೀ ಜಗದ್ಗುರು ರೇಣುಕಾಚಾರ್ಯರ ಪರಂಪರೆಯಲ್ಲಿ ಬಂದ ಮೊದಲ ರೇವಣಸಿದ್ಧನಾಗಿದ್ದಾನೆ.

ಶೃಂಗೇರಿ ಶಾರದಾಪೀಠ ಸ್ಥಾಪಕರಾದ ಆದಿಶಂಕರಚಾರ್ಯರಿಗೆ ಶ್ರೀ ಚಂದ್ರಮೌಳೀಶ್ವರಲಿಂಗ ಮತ್ತು ರತ್ನಗರ್ಭಗಣಪತಿ ಪ್ರದಾನ ಮಾಡಿದವರು ರೇವಣಸಿದ್ಧರು. ಇವರ ಬಗೆಗೆ ಕಾಶೀ ಲಕ್ಷಣಶಾಸ್ತ್ರಿಗಳಿಂದ ರಚಿತವಾದ 'ಗುರುವಂಶ ಕಾವ್ಯ'ದಲ್ಲಿ ಹೀಗೆ ಬರೆಯಲಾಗಿದೆ:

*ಶ್ರೀ ಚಂದ್ರಮೌಳೀಶ್ವರಲಿಂಗಮಸ್ಮೈ ಸದ್ರತ್ನಗರ್ಭಂ ಗಣನಾಯಕಂ ಚ ।*
*ಸ ವಿಶ್ವರೂಪಾಯ ಸುಸಿದ್ಧದತ್ತಂ ದತ್ವಾನ್ಯಗಾದೀಚ್ಛಿರ ಮರ್ಚಯೇತಿ ॥* [5]

ಇಲ್ಲಿ ಉಲ್ಲೇಖವಾದ 'ಸುಸಿದ್ಧದತ್ತಂ' ಎಂಬುಕ್ಕೆ ಗ್ರಂಥಕಾರರು "ಸುಸಿದ್ಧೇನ ರೇವಣಸಿದ್ಧ ಮಹಾಯೋಗಿನಾ ದತ್ತಂ ಶ್ರೀ ಚಂದ್ರಮೌಳೀಶ್ವರಲಿಂಗಮ್" ಎಂದು ವ್ಯಾಖ್ಯಾನಿಸಿದ್ದಾರೆ. ಆದಿಶಂಕರರ ಕಾಲ ಕ್ರಿ.ಶ. 8ನೇ ಶತಕವೆಂದು ಸರ್ವಮಾನ್ಯವಾಗಿದೆ.

ಕ್ರಿ.ಶ. ಮೂರನೇ ಶತಮಾನದ ರೇನಾಡು ಚೋಳರಾಜ ಎರಿಕಲ್ಮತ್ತು ಧನಂಜಯ ರಾಜನ ಕಲಮಲ್ಲ ಶಾಸನ, ಪೊಟ್ಲದುರ್ತಿ ಶಾಸನದಲ್ಲಿ 'ರೇವಣ'ನ ಉಲ್ಲೇಖ ಬರುತ್ತದೆ. ಅಮ್ಮೇರಹಳ್ಳಿಯ ಕ್ರಿ.ಶ. 1196ರ ಶಾಸನದಲ್ಲಿ 'ರೇವಣಸಿದ್ಧೇಶ್ವರ' ಎಂದು ಬಂದಿದೆ. ಕಕ್ಕೇರಿ (ತಾ. ಸುರಪುರ) ಶಾಸನ ಕ್ರಿ.ಶ. 1127ರಲ್ಲಿ 'ರೇವಣದೇವ' ಎಂದು ಬರೆದಿದೆ. ಹೋತಗಲ್ ಶಾಸನ (ತಾ. ಕಲಬುರ್ಗಿ)ದಲ್ಲಿ 'ಸಿದ್ಧರೇವಣಯ್ಯ' ಎಂದು ಅಲ್ಲದೇ ಕ್ರಿ.ಶ. 999ರ ಬೆಡ್ಕಿಹಾಳ್, ಕ್ರಿ.ಶ.998ರ ಬೇವಿನಹಳ್ಳಿ. ಕ್ರಿ.ಶ. 1068 ಬಾಗಳಿ, ಕ್ರಿ.ಶ 1079ರ ಹಾಲೂರು, ಕ್ರಿ.ಶ 1152ರ ಮಸೂತಿ, ಕ್ರಿ.ಶ. 1182ರ ನರೇಗಲ್ ಶಾಸನಗಳಲ್ಲಿ ರೇವರಸ, ರೇವಣ, ಕುಮಾರ ರೇವರಸ, ರೇವಣದೇವ, ರೇವಣಸಿದ್ಧ ಎಮಬ ಹೆಸರುಗಳು ಉಲ್ಲೇಖಿತವಾಗಿವೆ. ಏವೂರ ಶಾಸನದಲ್ಲಿ 'ರೇವಣಂ' ಕೋಳಕೂರ ಶಾಸನದಲ್ಲಿ 'ರೇವಣೇಶ್ವರ' ಎಂದು ಪುಳಜೆ (ಮಹಾರಾಷ್ಟ್ರ) ಶಾಸನದಲ್ಲಿ 'ರೇವಣ' ಎಂದು ಬಂದಿರುವ ಹೆಸರುಗಳನ್ನು ಅವಲೋಕಿಸಿದರೆ

ಜಗದಾದಿ ಜಗದ್ಗುರು ಆದಿ ಶ್ರೀರೇಣುಕರು ವೀರಶೈವಧರ್ಮ ಸ್ಥಾಪಕರು, ಶ್ರೀಮದ್‌ರಂಭಾಪುರೀಪೀಠ ರಚಿಸಿ ವೀರಸಿಂಹಾಸನ ಏರಿದ ಪ್ರಥಮಿಗರು. ಕೊಲ್ಲಿಪಾಕಿ ಸೋಮೇಶ್ವರನಲ್ಲಿ ಉದಯಿಸಿದ ಇವರು ಅಗಸ್ತ್ಯ, ವಿಭೀಷಣ, ಶಿಂಶುಮಾರ, ಧರ್ಮಗುಪ್ತ, ಡಿಂಡಿಮಾರ ಸಾನಂದರೆಂಬ ಐತಿಹಾಸಿಕ ವ್ಯಕ್ತಿಗಳಿಗೆ ಆಶೀರ್ವಧಿಸಿ ಉದ್ಧರಿಸಿದವರು.

*ಅಧಮೇ ಚೋತ್ತಮೇ ವಾಪಿ ಯತ್ರ ಕುತ್ರಚಿ ದೂರ್ಜಿತಾ ।*
*ವರ್ತತೇ ಶಾಂಕರೀ ಭಕ್ತೀಸ ಭಕ್ತ ಇತಿ ಗೀಯತೆ ॥* [6]

ಉತ್ತಮನಾಗಲಿ, ಮ್ಲೇಚ್ಛನಲ್ಲಾಗಲಿ ಯಾವನಲ್ಲಿಯಾಗಲಿ ಶ್ರೇಷ್ಠವಾದ ಭಕ್ತಿಯಿರುವುದೋ ಅವನೇ ಶಿವಭಕ್ತನೆಂದು ಸಾರಿದರು. ಈ ಜಗದ್ಗುರುವಿನ ಪೀಠಪರಂಪರೆಯಲ್ಲಿ ರೇಣುಕ, ರೇವಣ, ರೇವಣಾರಾಧ್ಯ, ರೇವಣಸಿದ್ಧ, ರೇವಣಯ್ಯ ಎಂಬ ಅನೇಕ ಬಗೆಯ ಹೆಸರುಗಳುಳ್ಳ ಜಗದ್ಗುರುಗಳು ಆಗಿದ್ದಾರೆ. ಆದಿ ಜಗದ್ಗುರುಗಳ ತರುವಾಯ ವೀರಶೈವಧರ್ಮಕ್ಕೆ ವಿಶೇಷ ಭೂಷಣ ಪ್ರಾಯರಾಗಿ ಮತ್ತೊಮ್ಮೆ ಉತ್ಕ್ರಾಂತಿಗೈದವರೇ ಜಗದ್ಗುರು ರೇವಣಸಿದ್ಧರು ಇವರು ಬಸವಾದಿ ಶಿವಶರಣರ ಹಿರಿಯ ಸಮಕಾಲೀನರು.

ಆದಿರೇಣುಕರಿಂದ ಹಿಡಿದು ಹನ್ನೊಂದು ಹನ್ನೆರಡನೆಯ ರೇವಣಸಿದ್ಧರವರೆಗೆ ಕಾಲಮಾನವನ್ನು ಗುರುತಿಸುವುದು ಬಹಳ ಕಷ್ಟದ ಕೆಲಸ ಯಾಕೆಂದರೆ ಆದಿ ರೇಣುಕಾಚಾರ್ಯ ಭಗವತ್ಪಾದರು ರಾಮಾಯಣದ ಕಾಲದವರು. ಇವರು ಹನ್ನೊಂದು–ಹನ್ನೆರಡನೆಯ ಶತಮಾನಕ್ಕೆ ಸೇರಿದವರು. ರಾಮಾಯಣದ ಕಾಲವನ್ನು (As per recent scientific research now it is believed that Ramayana could be happened before 10,000 to 12,000 Years)[7] ಎನ್ನಲಾಗಿದೆ. ಇನ್ನೊಂದು ಮಾಹಿತಿ ಪ್ರಕಾರ ಸರೋಜ ಬಾಲಾ ಎನ್ನುವವರು ಕ್ರಿ.ಶ.ಪೂ ಜನೇವರಿ 10, 5114 ಎನ್ನುತ್ತಾರೆ.[8] ಅಂದರೆ ಆರುಸಾವಿರ ವರ್ಷಗಳ ಇತಿಹಾಸ. ಬರೀ 'ರೇವಣಸಿದ್ಧ' ರೆಂಬ ಹೆಸರಿನ ಜಗದ್ಗುರುಗಳದ್ದೇ ಹದಿನಾಲ್ಕುನೂರು ವರುಷವೆಂದು ಹರಿಹರನ ರಗಳೆಯಿಂದ ನಮಗೆ ತಿಳಿದು ಬರುತ್ತದೆ. ಆ ರಗಳೆ ಹೀಗಿದೆ :

*ತನ್ನ ಮನದೊಳ್ ಸಿದ್ಧರೇವಣಂ ನಡೆ ನೋಡಿ*
*ಪನ್ನಗಾಭರಣನಿತ್ತಾಜ್ಞೆ ನೆರೆ ಕೈಗೂಡಿ*
*ಅರಿದೇಳುನೂರರಿಯ ದೇಳುನೂರು ವತ್ಸರಂ*
*ನೆರೆ ಸಂದುದಿನ್ನಿಳೆಯೊಳಿರಲಾಗದು*[9]

ಹೀಗೆ ರೇವಣಸಿದ್ಧ ಜಗದ್ಗುರುಗಳ ಹೆಸರಿನ ಪರಂಪರೆ ಏಳುನೂರು ವರುಷ ಗುಪ್ತವಾಗಿಯೂ ಏಳುನೂರು ವರುಷ ಪ್ರಕಟವಾಗಿಯೂ ಇದ್ದುದು ನಮಗೆ ತಿಳಿದು ಬರುತ್ತದೆ. ಒಟ್ಟು ಮೂವರು ಪ್ರಸಿದ್ಧ ಜಗದ್ಗುರುಗಳೆಂದರೆ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯ ಭಗವತ್ಪಾದರು. (ರಾಮಾಯಣ ಕಾಲ), ಜಗದ್ಗುರು ರೇವಣರಾಧ್ಯರು (ಆದಿಗುರು ಶಂಕರಾಚರ್ಯರ ಕಾಲ) ಮತ್ತು ಜಗದ್ಗುರು ರೇವಣಸಿದ್ಧರು ( ಶ್ರೀ ಜಗಜ್ಯೋತಿ ಬಸವೇಶ್ವರರ ಹಿರಿಯರು)

ಈ ಪ್ರಸಿದ್ಧರಲ್ಲದೇ ಶ್ರೀಮದ್ ರಂಭಾಪುರೀ ಪೀಠ ಪರಂಪರೆಯಲ್ಲಿ ಇದೇ ಹೆಸರಿನಿಂದ ಅನೇಕ ಗುರುಗಳು ಆಗಿ ಹೋಗಿದ್ದಾರೆಂಬುದು ಸ್ಪಷ್ಟ. ಈಗಾಗಲೇ ಈ ವಿಷಯ ಕುರಿತು ಆದಿರೇಣುಕರು, ರೇವಣಸಿದ್ಧರಿಗೆ ಸಂಬಂಧಿಸಿದ ಸಂಗತಿಗಳನ್ನು ಒಬ್ಬರಿಗೆ ತಳಕು ಹಾಕಿ ಗೊಂದಲವನ್ನೇರ್ಪಡಿಸಿ ಸಮಾಜದಲ್ಲಿ ಅಲ್ಲೋಲ್ಲ ಕಲ್ಲೋಲ ಸೃಷ್ಟಿಸಿದ ಗಾಂಪುರಗುಂಪು ಇನ್ನಾದರೂ ನಿಜದ ನಿಲುವನ್ನು ಅರಿತುಕೊಳ್ಳಲಿ. ರೇಣುಕರೇ ಬೇರೆ, ರೇವಣಸಿದ್ಧರುಗಳೇ ಬೇರೆ.

*ನ ವೀರಶೈವಸದೃಶಂ ಮತಮಸ್ತಿ ಜಗತ್ತ್ರಯೇ ।*
*ಸರ್ವಭೋಗಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಮ್ ॥*[10]

ಷಡ್‌ದರ್ಶನಗಳಲ್ಲಿ ವೀರಶೈವವು ಉದಾತ್ತವಾದ ನಿಲುವು, ಸರ್ವಸಮಾನತೆಯ ಗೆಲುವು, ಸಕಲ ಪ್ರಾಣಿಗಳಲ್ಲಿನ ಒಲವಿನಿಂದ ಸರ್ವೋತ್ಕೃಷ್ಟವಾದ ಛಲ ಹೊಂದಿ, ಶಿವಸಾಯುಜ್ಯದ ಕಡೆಗೆ ಕರೆದೊಯ್ಯುವ ಬಂಧುರತೆಯನ್ನು ಮೈಗೂಡಿಕೊಂಡುದಾಗಿದೆ.

***ವಿರೋಧಾರ್ಥೋ ವಿಶಬ್ದಃಸ್ಯಾದ್ ರ ಶಬ್ದೋ ರಹಿತಾರ್ಥಕಃ ।***

***ವಿರೋಧರಹಿತಂ ಶೈವಂ ವೀರಶೈವಂ ವಿದುರ್ಬುಧಾಃ ॥***[11]

ವಿರೋಧರಹಿತನಾದವನೇ ವೀರಶೈವ. ಯಾರನ್ನೂ ಯಾವುದನ್ನೂ ಎಂದೂ ವಿರೋಧ ಮಾಡದೇ ತನ್ನಂತೆ ಪರರನ್ನು ಬಗೆದು ಉದ್ಧಾರಗೈಯುತ್ತ ಸಾಯುಜ್ಯ ಪದವಿಗೇರಿಸಿದವರು ಪಂಚಾಚಾರ್ಯರು.

**ಜಗದ್ಗುರು ರೇವಣಸಿದ್ಧರು**

ಅರಿವನ್ನು ಆವುಗೆ ಮಾಡಿಕೊಂಡು, ಜ್ಞಾನ ಪಾಂಡಿತ್ಯವನ್ನು ದಂಡವಾಗಿ ಹಿಡಿದುಕೊಂಡು, ಕಚ್ಚಾಡುವ ಜನರನ್ನು ಬಡಿದೆಚ್ಚರಿಸುತ್ತ ಮಡದಿ, ಮಕ್ಕಳು ಪಡೆದ ದ್ರವ್ಯವು ಎನ್ನೊಡವೆ ಎಂದು ನೆಚ್ಚಿ ಕುಳಿತ ಹುಚ್ಚರಿಗೆ ಎಚ್ಚರಿಕೆ ಗಂಟೆ ಬಾರಿಸಿ, ಅಸ್ತವ್ಯಸ್ಥವಾಗಿ ಹೋಗಿದ್ದ ವೀರಶೈವ ಸಮಾಜವನ್ನು ಅಚ್ಚುಕಟ್ಟಾಗಿ ಮಾಡಲು ಬಂದವರೇ ಜಗದ್ಗುರು ರೇವಣಸಿದ್ಧರು. ಇವರು ಬಸವಾದಿ ಶಿವಶರಣರ ಹಿರಿಯ ಸಮಕಾಲೀನರಾಗಿದ್ದರು. 'ಚೆಂಗಣಿಗಿಲ ಮಂಟಪ' ಎಂಬ ಅನುಭಾವಿಗಳ ವೇದಿಕೆ ಕಟ್ಟಿದರು. ಇಲ್ಲಿ ಎಲ್ಲ ಅಧ್ಯಾತ್ಮವಾದಿಗಳಿಗೆ ಮುಕ್ತ ಪ್ರವೇಶ ಕಲ್ಪಿಸಿದರು. ಸದೃಢ ಸಮಾಜ, ಸಾಮಾಜಿಕ ನ್ಯಾಯ, ಧರ್ಮ ಜಾಗೃತಿಯಂತಹ ಅನೇಕ ವಿಷಯಗಳನ್ನು ಇಲ್ಲಿ ಚರ್ಚಿಸಲಾಗುತ್ತಿತ್ತು ಬಹುಶಃ ಈ ಮಂಟಪದ ವಿಸ್ತಾರ ರೂಪವೇ ಬಸವಣ್ಣನ 'ಅನುಭವ ಮಂಟಪ'.

ಜಗದುದ್ಧಾರದ ಉದ್ಯೋಗವನ್ನು ಕೈಗೊಂಡು ಆಹಾರ ನೀರಡಿಕೆಗಳ ಮೆಟ್ಟಿನಿಂತು, ನಿದ್ರೆ ವಿಶ್ರಾಂತಿಗಳನ್ನು ಲೆಕ್ಕಿಸದೆ ಸಮಾಜದ ಜನ ಸಾಮಾನ್ಯರಿಗೆ ಎಲ್ಲಿ ಅನ್ಯಾಯ, ದಬ್ಬಾಳಿಕೆ, ದೌರ್ಜನ್ಯ ನಡೆಯುತ್ತದೋ ಅಲ್ಲಿಗೆ ಧಾವಿಸಿ ಬಡವ ಬಲ್ಲಿದರೆನ್ನದೆ ನ್ಯಾಯ ಸಮ್ಮತಗೊಳಿಸಿ, ಅರಮನೆ–ಗುರುಮನೆ, ಗುಡಿಸಲು–ಬಯಲಿಗೆ ಪಾದಬೆಳಸಿ ವೀರಶೈವಧರ್ಮವನ್ನು ಜಗದಗಲ ಹರಡಿಸಿದ ಕೀರ್ತಿ ಜಗದ್ಗುರು ರೇವಣಸಿದ್ಧರಿಗೆ ಸಲ್ಲುತ್ತದೆ. ಕೃಷಿ ಋಷಿಯಾದ ಜಗದ್ಗುರು ರೇವಣಸಿದ್ಧರು ಜಟ್ಟೂರು ಗ್ರಾಮಕ್ಕೆ ಬಂದು ಆಚಿಗೊಂಡನಲ್ಲಿ ವೇಷ ಮರಿಸಿಕೊಂಡು ಹೋಗಿ ಹದಗೆಟ್ಟ ಕೃಷಿ ಮೌಲ್ಯಗಳನ್ನು, ಕ್ರಮ–ಪದ್ಧತಿಗಳನ್ನು ಹಸನುಗೊಳಿಸಿದರು. ಕೃಷಿ ಋಷಿಗೆ ಏನೇನು ಗೊತ್ತಿತ್ತು ಎಂದು ಕಾವ್ಯ ಹೀಗೆ ತಿಳಿಪಡಿಸುತ್ತದೆ:

***ಹರಗಬಲ್ಲೆನು ಬಿತ್ತಬಲ್ಲೆನು***
***ಹರಿದು ಬಳಿಸಾಲುಗಳ ಹೊಡೆವೆನು***
***ಹರಿದು ಬಿಸುಟವೆ ಕರ್ಮ ಕಸಗಳ ಎಡಿಯ ಹರಗುವೆನು***
***ಹೊರೆಯ ಹೊರುವೆನು ನಟ್ಟ ಕಡಿವೆನು***
***ಹುರಿಯ ಬಿಡುವೆನು ಹಗ್ಗ ಕಣ್ಣೆಯ***
***ಕೊರಡ ಕಡಿವೆನು ಹೆಡಿಗೆ ಹಣೆವೆನು ಕೆಲಸ ಈಡಿಲ್ಲ***[12]

ಏನೂ ಬೆಳೆಯದ ಬಂಜರ ಭೂಮಿಯನ್ನು ರೇವಣಸಿದ್ಧರು ಹಸಿರುಗೊಳಿಸಿ ಆಚಿಗೊಂಡ–ಬನದದೇವಿ ದಂಪತಿಗಳನ್ನು ಉದ್ಧರಿಸಿ ಕೃಷಿಯ ಹೊಸ ಪದ್ಧತಿಗಳನ್ನು ಅವರಿಗೆ ತಿಳಿಸಿಕೊಟ್ಟು ಆಶೀರ್ವದಿಸುತ್ತಾರೆ. ವಿಷ್ಣು

ಕಂಚಿಯಲ್ಲಿ (ವೀರ) ಶೈವರ ಮೇಲಿನ ದಬ್ಬಾಳಿಕೆಯನ್ನು ಮನಗಂಡು ಅದನ್ನು ನಿಲ್ಲಿಸಲು 'ಪಿಣ್ಣಾಕನೈನಾರ' ಎಂಬ ಹೆಸರು ತಳೆದು ವೇಷ ಮರಸಿಕೊಂಡು ಅಲ್ಲಿಗೆ ಹೋಗಿ ವೈಷ್ಣವರ ದಬ್ಬಾಳಿಕೆಗೆ ಎದಿರೇಟು ನೀಡಿ ಬುದ್ದಿಗಲಿಸುತ್ತಾರೆ. ಅಲ್ಲಿನ ರಾಜ ವಿಜಯೇಂದ್ರ ಚೋಳನಿಗೆ ವೀರಶೈವರನ್ನು ಕಾಪಾಡುವಂತೆ ತಾಕೀತು ಮಾಡಿ ಧರ್ಮ ಸಹಿಷ್ಣತೆಗೆ ಕಾರಣನಾಗಿ ಆತನಿಗೆ ಹರಸುತ್ತಾರೆ.

ಮಾಸನೂರು (ಇಂದಿನ ಮಹಾರಾಷ್ಟ್ರ) ಹೊರ ವಲಯದಲ್ಲಿರುವ ಶಿವಾಲಯದ ಬಳಿ ಇರುವ ವಟಕುಜದ ಪೊಟರೆಯಲ್ಲಿನ ಹೀನರಾಕ್ಷಸ ಮಿಥುನ(ತಗುಣಿ)ಗಳ ಸಂಹರಿಸಿ ಅವುಗಳನ್ನು ಸುರಿಗಿ ಮಾಡಿ ಒಂದನ್ನು ಅದು ಶಿವಾಲಯದ ಪಕ್ಕದಲ್ಲಿರುವ ನೀರಿನ ಮಡುವಿನಲ್ಲಿ ಇರಿಸಿ ಇನ್ನೊಂದನ್ನು ಜಯಂತಿ (ಜತ್ತ) ವಿಕ್ರಮಾದಿತ್ಯ ರಾಜನಿಗೆ ಕೊಡ ಮಾಡುತ್ತಾರೆ. ಈ ಖಡ್ಗ (ಸುರಿಗಿ) ಸಹಾಯದಿಂದ ಜಯಂತಿ ವಿಕ್ರಮಾದಿತ್ಯ ಬಹಳ ಪ್ರಸಿದ್ಧಿಗೆ ಬರುತ್ತಾನೆ. ಮಂಗವೇಡೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಮಾಂಡಳಿಕ ಅರಸ ಬಿಜ್ಜಳ ಈ ಸಂಗತಿ ತಿಳಿದು ಕರ್ಪರ ಜೋಗಿ ಎಂಬ ಮಾಂತ್ರಿಕನ ಸಹಾಯದಿಂದ ಮಾಸನೂರು ಮಡುವಿನಲ್ಲಿರಿಸಿದ ಸುರಗಿ (ಖಡ್ಗ) ಪಡೆದುಕೊಳ್ಳಲು ಹವಣಿಸುತ್ತಾನೆ. ಮಾಂತ್ರಿಕ ಮಾಡಿದ ಮಹಾಪರಾದಕ್ಕೆ ಕೈ ಜೋಡಿಸಿದ ಬಿಜ್ಜಳ ಸುರಗಿ ಪಡೆಯಲು 12ಸಾವಿರ ಕನ್ಯೆಯರ ಬಲಿ ಪಡೆಯುವಾಗ ಮೈಮಾರಿ ಜಿವನ ಮಾಡುವವಳ ಮೊರೆ ಕೇಳಿ ಜಗದ್ಗುರು ರೇವಣಸಿದ್ಧರು ಅಲ್ಲಿಗೆ ಬಂದು 12ಸಾವಿರ ಕನ್ಯೆಯರ ಬಲಿ ತಪ್ಪಿಸಿ ಬಿಜ್ಜಳನಿಗೆ ಬುದ್ಧಿ ಹೇಳುತ್ತಾರೆ.

ಬಿಜ್ಜಳ ಧರ್ಮ ಪ್ರಕಾರ ನಡೆದಿಲ್ಲವೆಂದು ಮತ್ತೊಮ್ಮೆ ಆತನಲ್ಲಿಗೆ ಮಾರುವೇಷಧರಿಸಿ ಬಂದು ಅಂಬಲಿ ಬೇಡಿದಾಗ ಆತ ಕುದಿಯುವ ಅಂಬಲಿಯನ್ನು ನೀಡಿಸುತ್ತಾನೆ. ಇದರಿಂದ ಈತನಿಗೆ ಇನ್ನೂ ಬುದ್ಧಿ ಬಂದಿಲ್ಲವೆಂದರಿತ ಜಗದ್ಗುರುಗಳು ಆ ಅಂಬಲಿಯನ್ನು ಮಂಗಳವೇಡೆಯ ಅರಮನೆಯ ಹಜಾರದಲ್ಲಿನ ಕಂಬಗಳಿಗೆ ಒರಸಿದಾಗ ಅದರಿಂದ ಅರಮನೆ ಸುಡಲು ಆರಂಭವಾಗುತ್ತದೆ. ಅಲ್ಲಿ ಮಂತ್ರಿಯಾಗಿದ್ದ ಬಸವಣ್ಣ ಜಗದ್ಗುರು ರೇವಣಸಿದ್ಧರು ಯಾರೆಂಬುದನ್ನು ಬಿಜ್ಜಳನಿಗೆ ಮನವರಿಕೆ ಮಾಡಿ ಶ್ರೀ ಜಗದ್ಗುರುಗಳ ಆಶೀರ್ವಾದವನ್ನು ಪಡೆಯುತ್ತಾರೆ. ಆಗಲೇ ಬಸವಣ್ಣನಿಗೆ ಪುರುಷ ಪಂಚಸ್ಥನಾಗೆಂದು ಆಶೀರ್ವದಿಸಿ ಭಸ್ಮ ಪ್ರಸಾದವನ್ನು ನೀಡುತ್ತಾರೆ.[13] ಕುಡಿಯುವ ನೀರಿಗಾಗಿ ತ್ರಿಪುರಾಂತಕ ಕೆರೆಯನ್ನು ತಾವೇ ಸ್ವತಃ ಶಿಷ್ಯರ ಜೊತೆಗೂಡಿ ನಿರ್ಮಿಸುತ್ತಾರೆ. ದೋಸೆ ಸ್ವೀಕರಿಸಿ ಜಂಬೂರಲ್ಲಿ ಕೆರೆ ಕಟ್ಟಿಸುತ್ತಾರೆ. ಕಲ್ಯಾಣದ ಗಾಣಿಗೇರ ಕಲ್ಲಿಶೆಟ್ಟಿ ದಂಪತಿಗಳ ಬಡತನ ನಿವಾರಿಸಿ, ಒಕ್ಕಣ್ಣುಳ್ಳ ಆ ದಂಪತಿಗಳಿಗೆ ಕಣ್ಣು ದಯಪಾಲಿಸಿ ಸಿರಿವಂತಿಕೆಯನ್ನಿಯುತ್ತಾರೆ. ಮಂಗಳವೇಡೆಯಲ್ಲಿನ ವಾರನಾರಿಯರ ಬದುಕಿನ ದಿಕ್ಕನ್ನು ಬದಲಾಯಿಸುತ್ತಾರೆ. ನವನಾಥರಲ್ಲಿ ಅತ್ಯಂತ ಪ್ರಸಿದ್ಧನಾದ ಗೋರಕ್ಷನಾಥನ ಮದವಡಗಿಸಿ ಅವನಿಗೆ ವೀರಶೈವ ಉಪದೇಶ ನೀಡುತ್ತಾರೆ.

ಬಸವಣ್ಣನ ಕೈಂಕರ್ಯಕ್ಕೆ 21 ಸಾವಿರ ಚರಲಿಂಗಮೂರ್ತಿಗಳನ್ನು ಕೊಡಮಾಡುತ್ತಾರೆ.[14] ಸೊನ್ನಲಿಗಿ ಸಿದ್ಧರಾಮನ ಜನನದ ಭವಿಷ್ಯ ನುಡಿಯುತ್ತಾರೆ.[15] ಘನಲಿಂಗ ರುದ್ರಮುನಿಯಂಥ ಜಗದ್ಗುರುವನ್ನು ತಯಾರು ಮಾಡಿ ಅವರಿಂದ ಕಾಲಜ್ಞಾನ ಬರೆಯಿಸುತ್ತಾರೆ. ವೈದ್ಯ ಪದ್ಧತಿ, ಆರ್ಥಿಕ ಪದ್ಧತಿಯಲ್ಲಿ ಅನೇಕ ಸುಧಾರಣೆಗಳನ್ನು ತಂದ ಇವರು ಎಲೆಗಳ ರಸದಿಂದ ಬಂಗಾರ ತಯಾರಿಸುತ್ತಿದ್ದರೆಂದು ಕಾವ್ಯಗಳನ್ನು

ಅವಲೋಕಿಸಿದಾಗ ತಿಳಿದು ಬರುವ ಸಂಗತಿಯಾಗಿದೆ. ಕಲ್ಯಾಣದಿಂದ ಹೊರಹಾಕಲ್ಪಟ್ಟ ಕುರುಬರನ್ನು ಮತ್ತೆ ಕಲ್ಯಾಣಕ್ಕೆ ಕರೆತಂದು ಅವರಿಗೆ ತಳಊರಲು ಸಹಾಯ ಮಾಡುತ್ತಾ ಅವರಿಗೆ ಲಿಂಗದೀಕ್ಷೆ ಕರುಣಿಸಿ ವೀರಶೈವಧರ್ಮವನ್ನು ಬೋಧಿಸುತ್ತಾರೆ. ಹಾಲುಮತದವರು ಇಂದಿಗೂ ಜಗದ್ಗುರು ರೇವಣಸಿದ್ಧರನ್ನು ಕುಲ ಗುರುಗಳೆಂದು ಒಪ್ಪಿಕೊಂಡು ನಡೆದಿದ್ದಾರೆ.[16] ಮಧ್ಯಪ್ರದೇಶದ ಉಜ್ಜೈನಿಯಲ್ಲಿ ಜೈನರ ಕಾಟ ತೀವ್ರಗೊಂಡಾಗ ಅಲ್ಲಿರುವ ಸದ್ಧರ್ಮಪೀಠ ಸಮೇತ ಶ್ರೀ ಜಗದ್ಗುರು ಮರುಳಸಿದ್ಧರು ಕರ್ನಾಟಕಕ್ಕೆ ವಲಸೆ ಬರುತ್ತಾರೆ. ಅವರಿಗೆ ಬೆಂಗಾವಲಾಗಿ ನಿಂತು ಕರ್ನಾಟಕದ ಕೊಟ್ಟೂರು ಬಳಿ ಇರುವ ಉಜ್ಜಿನಿಯಲ್ಲಿ ನೆಲೆ ಕಲ್ಪಿಸಿ ಪೀಠಕ್ಕೆ ಭದ್ರತೆ ಒದಗಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಬಿಜ್ಜಳ, ವಿಜಯೇಂದ್ರಚೋಳ, ರಾಜೇಂದ್ರಚೋಳ, ವಿಕ್ರಮಾದಿತ್ಯ ಈ ಮುಂತಾದ ರಾಜಗುರುಗಳಿಗೆ ರಾಜಗುರುಗಳಾಗಿದ್ದರು. ಜಗದ್ಗುರು ರೇವಣಸಿದ್ಧರು "ನೋಡಿದುದೆ ಜಗತ್ಪಾವನಂ, ಮುಟ್ಟಿದುದೆ ಪರುಷಂ, ಮೆಟ್ಟಿದುದೆ ದಿವ್ಯಕ್ಷೇತ್ರಂ ನಡೆದುದೆ ಪುಣ್ಯಮಾರ್ಗ, ನುಡಿದುದೆ ಪರಮತತ್ವಂ, ಇರ್ದುದೆ ದೇವಸಭೆ, ಸಾರ್ದುದೆ ಸುರತರುವೆನಿಪ್ಪ ನಿರ್ಮಳ ಕೀರ್ತಿಯಂ ಪಡೆದು ಶೈವಪ್ರತಾಪ ಸಿದ್ಧನನವರತ ಧರ್ಮತತ್ಪರಂ"[17] ಎಂದು ಹರಿಹರ ತಿಳಿಸಿದ್ದಾನೆ.

ಅನುಪಮ ಚರಿತೆಯುಳ್ಳ ಜಗದ್ಗುರು ರೇವಣಸಿದ್ಧರು ಜನಮಾನಸವನ್ನು ಗೆದ್ದವರು. ಇವರನ್ನು ಕುರಿತು ಶಾಸನಗಳು, ಶಿಲ್ಪಿಗಳು, ಕ್ಷೇತ್ರಗಳು ಹುಟ್ಟಿಕೊಂಡಿವೆ. ವಚನ–ಕಾವ್ಯ–ಪುರಾಣ–ಚರಿತ್ರೆಗಳು ಜಾನಪದ ಸಾಹಿತ್ಯದಲ್ಲಿ ಇಡಿಯಾಗಿ ಬಿಡಿಯಾಗಿ ಶ್ರೀಗಳ ಚರಿತ್ರೆಯ ಘಟನೆಗಳು ನಮಗೆ ಲಭ್ಯವಾಗುತ್ತದೆ. 19ಸಂಸ್ಕೃತ, 32ಕನ್ನಡ, 8 ತೆಲುಗು, 5ಮರಾಠಿ, 1ಹಿಂದಿ, 4ಇಂಗ್ಲೀಷ ಇತರೆ ಸಂಶೋಧನ ಗ್ರಂಥಗಳು ಒಟ್ಟು 100ಕ್ಕೂ ಅಧಿಕ ಸಂಖ್ಯೆಯಲ್ಲಿ ಜಗದ್ಗುರು ರೇವಣಸಿದ್ಧರನ್ನು ಕುರಿತು ಕೃತಿಗಳು ಜನ್ಮ ತಳೆದಿವೆ. ಇಂತಹ ಯುಗಪುರುಷನನ್ನು ಅನುಲಕ್ಷಿಸಿದ ಪ್ರಸ್ತುತ ಭಗವತ್ಪಾದರು "ಧರ್ಮಸಂಸ್ಕೃತಿಗಳ ಸಂವರ್ಧನೆಯ ಜೊತೆ ಜೊತೆಗೆ ಸಾಮಾಜಿಕ ಸತ್ಕ್ರಾಂತಿಯನ್ನು ಎಸಗಿದ ಲೀಲಾಪುರುಷರು. ಅಣಿಮಾದಿ ಅಷ್ಟಸಿದ್ಧಿಗಳನ್ನು ಗಳಸಿಕೊಂಡ ಮಹಾಂತರು. ಪರಶಿವನ ಅಪರಾವತಾರಿ ಶಿವಯೋಗಿ ಸಿದ್ಧಕುಲ ಚಕ್ರವರ್ತಿ ಶ್ರೀ ಜಗದ್ಗುರು ರೇವಣಸಿದ್ಧರು ಸಂವೇದನಾಶೀಲ ಪರಮಾಚಾರ್ಯರು'[18] ಎಂದಿದ್ದಾರೆ.

**ಶಾಸನಗಳಲ್ಲಿ ಜಗದ್ಗುರು ರೇವಣಸಿದ್ಧರು**

ಕ್ರಿ.ಶ. 1122ರ ನಾಂದೇಡ್ ಜಿಲ್ಲೆ ಭೀಮಾಗ್ರಾಮ (ಮಹಾರಾಷ್ಟ್ರ)ದ ಶಾಸನ[19]ದಲ್ಲಿ ರೇವಣಯ್ಯ ಹಾಗೂ ರೇವಣೇಶ್ವರ ದೇಗುಲದ ಪ್ರಸ್ತಾಪ ಬರುತ್ತದೆ. ಜಗದ್ಗುರುಗಳು ಬದುಕಿರುವಾಗಲೇ ಅವರ ಹೆಸರಿನ ದೇವಾಲಯ ಇದ್ದುದ್ದು ಜಗದ್ಗುರುಗಳು ಬದುಕಿರುವಾಗಲೇ ಅವರ ಹೆಸರಿನ ದೇವಾಲಯ ಇದ್ದದ್ದು ಹೆಮ್ಮೆಯ ಸಂಗತಿಯಾಗಿದೆ. ಕ್ರಿ.ಶ. 1127ರಲ್ಲಿ ಗುಲಬರ್ಗಾ(ಕಲಬುರ್ಗಿ) ಜಿಲ್ಲೆಯ ಸುರಪುರ ತಾಲೂಕಿನ ಪೈಕಿ ಕಕ್ಕೇರಿ ಗ್ರಾಮದಲ್ಲಿಯ ಕಕ್ಕಯ್ಯನ ದೇವಸ್ಥಾನದಲ್ಲಿನ ಕಂಬದ ಉತ್ತರ ಮುಖದಲ್ಲಿ ಹೀಗೆ ಖಂಡರಿಲಾಗಿದೆ.

***ಮಹಾಸ್ಥಾನಂಗಳಾಚಾರ್ಯ್ಯ ಸಿದ್ಧರೇವಣದೇವನ ಶಿಷ್ಯ ಬ್ರಹ್ಮರಾ***
***ಸಿ ಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿ***[20] ***...........***

ರೇವೇಶ್ವರ ದೇವಸ್ಥಾನದ ಮಹಾಸಂಸ್ಥಾನಂಗಳಾಚಾರ್ಯ ರೇವಣಸಿದ್ಧರ ಶಿಷ್ಯನಾಗಿರುವ ಬ್ರಹ್ಮರಾಸಿ ಪಂಡಿತರ ಕಾಲು ತೊಳೆದು ಭೂಮಿ, ಗಾಣ ಮತ್ತೆ ಕೆಲವು ಸೂಂಕದಾನ ಮಾಡಿದ್ದು ತಿಳಿದು ಬರುತ್ತದೆ.

ಕ್ರಿ.ಶ. 1152ರ ಮಸೂತಿ (ಬ.ಬಾಗೇವಾಡಿ ತಾಲೂಕು) ಶಾಸನ[21]ವು ಕಲ್ಯಾಣದ ಚಾಲುಕ್ಯ ಮೂರನೆಯ ತೈಲಪನ ಕಾಲದಾಗಿದ್ದು ರೇವಣೇಶ್ವರ ದೇಗುಲಕ್ಕೆ ಗ್ರಾಮದ ದಾಸಿಮಯ್ಯನ ಮಗಳಾದ ಕಾಳಿಯವ್ವೆ ದಾನ ನೀಡಿರುವ ಸಂಗತಿ ಇದೆ. ಕ್ರಿ.ಶ. 1175ರ ಹೋತಗಲ್ಲಿ ಶಾಸನ[22]ದಲ್ಲಿ ಕಲ್ಯಾಣ ಚಾಲುಕ್ಯ ದೊರೆ 4ನೇ ಸೋಮೇಶ್ವರನ ಕಾಲದ ಈ ಶಾನಸದಲ್ಲಿ ಸಿರಿವೊಳಲು ಸಿದ್ಧ ಶಿವಯೋಗಿ ಶಾಂತಿಮಯ್ಯ ದೇವರ, ಸಿದ್ಧೇಶ್ವರ ದೇವರ ನಿತ್ಯ ಸೇವೆಗಾಗಿ ಸಿದ್ಧರೇವಣಯ್ಯಗಳ ಪಾದ ಪ್ರಕ್ಷಾಲನ ಮಾಡಿ ಸಗರ 500 ಬಾಡದ ಪಕ್ಕದಲ್ಲಿರುವ ಹೋತಗಲ್ಲ (ಕಲಬುರ್ಗಿ ಜಿಲ್ಲೆ)ನ್ನು ಮುಖ್ಯಸ್ಥರ ಸಮ್ಮುಖದಲ್ಲಿ ದತ್ತಿ ನೀಡಿದ ವಿಷಯವಿದೆ.

ಕಲಬುರ್ಗಿ ಜಿಲ್ಲೆಯ ಶಹಪುರ ತಾಲೂಕಿನ ಸಿರಿವಾಳ ಗ್ರಾಮದ ಶ್ರೀ ಸಿದ್ಧೇಶ್ವರ ದೇವಾಲಯದ ದಕ್ಷಿಣ ರಂಗಮಂಟಪದಲ್ಲಿನ ಕ್ರಿ.ಶ. 11587ರ ಶಾಸನ[23]ದಲ್ಲಿ ಜಗದ್ಗುರು ರೇವಣಸಿದ್ಧರ ಮಹಿಮೆಗಳನ್ನು ಕೆತ್ತಲಾಗಿದೆ. ಸರ್ವಜ್ಞಮೂರ್ತಿ ಜಗದೊಳಬ್ಬನೇ ಶಿವಸಿದ್ಧ, ತುಂಬಿದ ತೊರೆಯನ್ನು ಹರಿಗೋಲಿನ ಸಹಾಯವಿಲ್ಲದೇ ಯೋಗ ಬಲದಿಂದ ದಾಟಿ 'ಸಿದ್ಧ' ಎಂಬ ಹೆಸರನ್ನು ಪ್ರಸಿದ್ಧಗೊಳಿಸಿದರು. ಸಂಗೀತ, ನೃತ್ಯ, ಕಲೆ, ವೈದ್ಯಕೀಯ ರಂಗದಲ್ಲಿ ಪ್ರಾವಿಣ್ಯ ಹೊಂದಿದ್ದರೆಂಬ ಸಂಗತಿಯಿದೆ. ಕ್ರಿ.ಶ. 1193ರ ಅವ್ವೆಯರ ಹಳ್ಳಿಯ ಭೀಮೇಶ್ವರ ದೇವಾಲಯದ ಗಾಳಿ ಮಂಟಪದ ಹಿಂಭಾಗದ ಶಾಸನ[24]ದಲ್ಲಿ 'ರೇವಣಸಿದ್ಧೇಶ್ವರನ ಮಗ ಮರುಳಸಿದ್ಧೇಶ್ವರ' ಎಂದಿದೆ. ಫಂಡರಪುರ ತಾಲೂಕಿನ ಪುಳಜೆ ಶಾಸನ (ಕ್ರಿ.ಶ. 1200)ದಲ್ಲಿ ರೇವಣಮಡು ಎಂದಿದೆ. ರಾಣೆಬೆನ್ನೂರು ತಾಲೂಕಿನ ಚೌಡದಾನಪುರದ ಶಾಸನ (ಕ್ರಿ.ಶ. 1263)ದಲ್ಲಿ 'ಕಾರಣಿಕರೆನಿಪ ಸಿದ್ಧರೇವಣದೇವನ ಕಾರುಣ್ಯದ ಶಿಶು ಭಕ್ತ್ಯಾಚಾರದ ಬಲ್ಲಳದೇವ'[25] ಎಂದಿದೆ. ಕ್ರಿ.ಶ.ಸು 13ನೇ ಶತಮಾನದ ಇಂಡಿ ತಾಲೂಕಿನ ಹಿರೇಬೀವಿನೂರು ಗ್ರಾಮದ ಶಾಸನದಲ್ಲಿ 'ರೇವಣಸಿದ್ಧ'[26] ಉಲ್ಲೇಖವಿದೆ ಬಯಿರಿತ್ತಿ ಶಾಸನ (ಕ್ರಿ.ಶ. 1600)ದಲ್ಲಿ

ಮುಸುಕುಂದ ಮಹಾಋಷಿಯ ಪಿತಾಮ ರೇವಣಸಿದ್ಧಯ್ಯದೇವರಿದ್ದಂತಾ ವನಾಸ್ರಿಮ ಮುನಿಗಳು ಪೂಜೆಯ ಮಾಡಿದ ಮೂಲತಾಣ[27] ಎಂದು ಬರೆಯಲಾಗಿದೆ. ತುರುವೆಕೆರೆ ತ್ರಾಮಶಾಸನ[28] (ಕ್ರಿ.ಶ 1480)ದಲ್ಲಿ ಶಾಂತ ಮುತ್ತಯ್ಯನವರು ಹೇಳಿದ ಪ್ರಸಂಗ ಅದೆಂದರೆ ಜಗದ್ಗುರುರೇವಣಸಿದ್ಧರು ಕಂಚಿಯಿಂದ ತಮ್ಮಲ್ಲಿಗೆ ಬಂದು ಹಾಲುಮತದವರಿಗೆ ಲಿಂಗದೀಕ್ಷೆ ಮಾಡಿದ್ದು ಹೇಳಲಾಗಿದೆ. ಅಲ್ಲದೆ ಕೊಲ್ಲಿಪಾಕಿಯಲ್ಲಿ ಜನನ, ಕೊಲ್ಲಾಪುರದ ಸಿದ್ಧರನ್ನು ಕುರಿ ಮಾಡಿದ್ದು, ಕೆರೆಕಟ್ಟಿಸಿದ್ದು, ಏಳುನೂರು ಕನ್ಯೆಯರನ್ನು ಬಿಜ್ಜಳನಿಂದ ಬಿಡಿಸಿದ್ದು, ಕುರಿಯ ಪ್ರಾಣ ಬದುಕಿಸಿದ್ದು, ಕುರುಬರ ಸಾಯಿಮುತ್ತ್ಯೆ, ಸೊಯಿ ಮುತ್ತೇಯರಿಗೆ ಗುರುಗಳಾದ ವಿಷಯ ಇದರಲ್ಲಿ ಬಂದಿದೆ.

ಕ್ರಿ.ಶ. 1673ರ ಹಳ್ಳಂಬಳ್ಳಿ (ತಾ. ಮಳವಳ್ಳಿ)ಯ ವೀರಶೈವ ಮಠದಲ್ಲಿರುವ ತಾಮ್ರ ಶಾಸನದಲ್ಲಿ 'ರೇವಣಾರಾಧ್ಯರ ಮಠ'[29]ವೆಂದು ಪ್ರಸಿದ್ಧಿ ಪಡಿಸಿದ್ದಾರೆ. ಕ್ರಿ.ಶ. 1606ರ ಗುಮ್ಮಳಾಪುರ ಶಾಸನ[30]ವು

ಕೊಲ್ಲಿಪಾಕಿ ರೇವಣಸಿದ್ಧೇಶ್ವರ ಸಂಪ್ರದಾಯದ ನಂಜೇದೇವರ ಪಾದಕ್ಕೆ ಇಮ್ಮಡಿ ಕೆಂಪೆಗೌಡರು ಗುಮ್ಮಳಾಪುರ ದಾನ ಮಾಡಿದ ಸಂಗತಿ ತಿಳಿಯುತ್ತದೆ.

ಹೀಗೆ ಶಾಸನಗಳಲ್ಲಿ ಜಗದ್ಗುರು ರೇವಣಸಿದ್ಧರ ವ್ಯಕ್ತಿತ್ವ ಚರಿತ್ರೆ ಸಿಗುತ್ತದೆ. ಅದನ್ನೆಲ್ಲಾ ಒಟ್ಟಾಗಿ ಹೀಗೆ ಕ್ರೂಡೀಕರಿಸಬಹುದು. ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಜನನ ಪಡೆದು ಕೊಲ್ಲಾಪುರದ ಸಿದ್ಧರ ಮದವಡಗಿಸಿದ್ದು, ಬರಗಾಲದಿಂದ ಬಾಡಿ ಬಸವಳಿದ ಜನರಿಗೆ ಕೆರೆ ಕಟ್ಟಿಸಿದರು. ಏಳುನೂರು ಕನ್ಯೆಯರ ಬಲಿ ತಪ್ಪಿಸಿದರು. ತುಂಬಿದ ನದಿಯನ್ನು ಹರಿಗೋಲಿನ ಸಹಾಯವಿಲ್ಲದೇ ಯೋಗ ಬಲದಿಂದ ದಾಟಿದರು. ಸಂಗೀತದ ತಾಳಕ್ಕೆ ತಕ್ಕಂತೆ ನೃತ್ಯ ಮಾಡುವರಾಗಿದ್ದರು. ಕುರಿಗಳ ಪ್ರಾಣ ರಕ್ಷಣೆ ಮಾಡಿ ಹಾಲುಮತದವರಿಗೆ ಲಿಂದೀಕ್ಷೆ ಮಾಡಿ ಆ ಕುಲಕ್ಕೆ ಗುರುಗಳಾದವರು. ವೈದ್ಯಶಾಸ್ತ್ರದಲ್ಲಿ ಪಾರಂಗತರಾಗಿದ್ದರು. ಜಗದ್ಗುರು ಮರುಳಸಿದ್ಧರಿಗೆ ತಂದೆ ಸ್ಥಾನದಲ್ಲಿ ನಿಂತು ಆಶ್ರಯವನ್ನು ನೀಡಿದ್ದರು. ರಾಜ–ಮಹಾರಾಜ, ಸಾಮಂತ, ಮಂತ್ರಿ ಮಹೋದಯರಿಂದ ಪಾದಪೂಜೆ ಮಾಡಿಸಿಕೊಂಡು ಅವರಿಂದ ದಾನ–ದತ್ತಿ ಸ್ವೀಕಾರ ಮಾಡಿದವರಾಗಿದ್ದರು.[3] ಇವರ ಶಿಷ್ಯರು ಕೂಡ ಅತ್ಯಂತ ಪ್ರಸಿದ್ಧರಾಗಿದ್ದು ಗುರು ಮಹಿಮೆ ಹೆಚ್ಚಿಸಿದವರಾಗಿರುವ ಅಪರೂಪದ ದಾಖಲೆಗಳು ಶಾಸನಗಳಲ್ಲಿ ನಮಗೆ ಲಭ್ಯವಾಗುತ್ತವೆ. ಜಗದ್ಗುರು ರೇವಣಸಿದ್ಧರ ಉಲ್ಲೇಖವಿರುವ ಸುಮಾರು 520ಕ್ಕಿಂತ ಹೆಚ್ಚಿನ ಶಾಸನಗಳು ಲಭ್ಯವಿವೆ. ಅವುಗಳಲ್ಲಿರುವ ಸತ್ಯ ಸಂಗತಿ ಹೊರಬರಲು ಸಮಯ ಬೇಕೆ ಬೇಕು. ಹೀಗಾ ಶಾಸನಗಳಲ್ಲಿ ಜಗದ್ಗುರುಗಳ ಇತಿಹಾಸ ಖಂಡರಿಸಿದ್ದಾಗಿದೆ.

**ವಚನಗಳಲ್ಲಿ ಜಗದ್ಗುರು ರೇವಣಸಿದ್ಧರು.**

ವಚನ ಸಾಹಿತ್ಯವೆಂದರೆ ಶಾಸನಗಳ ನಂತರ ಅಧಿಕೃತಿ ದಾಖಲೆಗಳೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾಗಿದೆ. ಮೊಟ್ಟ ಮೊದಲು ಜಗದ್ಗುರು ರೇವಣಸಿದ್ಧೇಶ್ವರರನ್ನು ಕುರಿತು ತನ್ನ ವಚನದಲ್ಲಿ ಪ್ರಸ್ತಾಪಿಸಿದ ಶರಣ ಪುಲಿಗೆರೆ ಆದಯ್ಯ (ಕ್ರಿ.ಶ. 1078–1170) 'ರೇವಣಸಿದ್ಧಯ್ಯದೇವರ ನಿಷ್ಠೆ'[31] ಎಂದಿದ್ದಾನೆ. ಇನ್ನೊಂದು ವಚನದಲ್ಲಿ 'ರೇವಣಸಿದ್ಧಯ್ಯ ದೇವರನ್ನು ನೇತ್ರ'[32] ಎಂದು ಮನದುಂಬಿ ಕೊಂಡಾಡಿದ್ದು ಆನಂದವನ್ನುಂಟು ಮಾಡುತ್ತದೆ. ಹಾವಿನಾಳ ಕಲ್ಲಯ್ಯ ಜಗದ್ಗುರುಗಳನ್ನು ಹೀಗೆ ಸ್ವಾಯತ ಮಾಡಿಕೊಂಡಿದ್ದಾನೆ: 'ಎನ್ನ ನೇತ್ರದಲ್ಲಿ ಸ್ವಾಯತವಾದನಯ್ಯಾ ರೇವಣಸಿದ್ಧೇಶ್ವರ ದೇವರು'[33] ಮೆರೆಮಿಂಡಯ್ಯನೆಂಬ ವಚನಕಾರ 'ಎನ್ನ ನೇತ್ರ ಶುದ್ಧವಾಯಿತ್ತಯ್ಯ ರೇವಣಸಿದ್ಧೇಶ್ವರದೇವರ ಧರ್ಮದಿಂದ'[34] ಎನ್ನುತ್ತಾನೆ. ಇಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ ಮೂವರು ವಚನಕಾರರಿಗೆ ಜಗದ್ಗುರು ರೇವಣಸಿದ್ಧರು ಅದಯ್ಯನ ನೇತ್ರವಾಗಿ, ಹಾವಿನಾಳ ಕಲ್ಲಯ್ಯನ ನೇತ್ರದಲ್ಲಿ ಸ್ವಾಯತವಾಗಿ, ಮೆರೆಮಿಂಡಯ್ಯನ ನೇತ್ರವನ್ನೇ ತನ್ನ ಧರ್ಮ(ವೀರಶೈವ)ದಿಂದ ಶುದ್ಧೀಕರಣ ಮಾಡಿದ ದೇವರು ಎನಿಸಿದ ಸಂಗತಿ ಬೆಳಕಿಗೆ ಬರುತ್ತದೆ.

ಚನ್ನಬಸವಣ್ಣ ತನ್ನದೊಂದು ವಚನದಲ್ಲಿ ಜಗದ್ಗುರು ರೇವಣಸಿದ್ಧರನ್ನು ಸಾಕ್ಷಿ ಮಾಡಿಕೊಂಡು ಶೈವಲಿಂಗದ ಭಕ್ತಿ, ವೀರಶೈವದ ಲಿಂಗ ಜಂಗಮ ಷಟ್‌ಸ್ಥಲದ ಸುಳುಹು ನೀಡಿದ್ದಾನೆ.[35] ಚನ್ನಬಸವಣ್ಣನ

ತಾಯಿ ನಾಗಲಾಂಬಿಕೆ 'ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ'[36] ಎಂದು ಜಗದ್ಗುರು ರೇವಣಸಿದ್ಧರು ಲಿಂಗೋದ್ಭವರೆಂದು ಒಪ್ಪಿಕೊಂಡ ಅಮೂಲ್ಯ ಸಂಗತಿ ಇದೆ. ಸೊನ್ನಲಿಗೆ ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ ಜಗದ್ಗುರು ರೇವಣಸಿದ್ಧರನ್ನು ಅಪ್ಪ ಎಂದ ಸಂಗತಿ

***ಅಪ್ಪ ರೇವಣಸಿದ್ಧ ನೀರು ಹೊತ್ತನೆಂಬರು***
***ನಮ್ಮ ನೀರು ಹೊರುವವರು ಕೂಲಿಕಾರರೇನಯ್ಯ'***[37]

ಹಾಗೆ ಹೇಳಲು ಕಾರಣವಿಲ್ಲದಿಲ್ಲ. ಹಿಂದೆ ಜಗದ್ಗುರು ರೇವಣಸಿದ್ಧರು ಸೊನ್ನಲಿಗೆಗೆ ಸಾಗಿ ಸಿದ್ಧರಾಮೇಶ್ವರರ ತಾಯಿಗೆ ಆಶೀರ್ವದಿಸಿ ಸೊನ್ನಲಿಗೆಗೆ ಸಾಗಿ ಸಿದ್ಧರಾಮೇಶ್ವರರ ತಾಯಿಗೆ ಆಶೀರ್ವದಿಸಿ ಆತನ ಜನನ ಕುರಿತು ತಿಳಿಸಿದ್ದರು (ಭವಿಷ್ಯ ನುಡಿದಿದ್ದರು) ಹೀಗಾಗಿ ಅವನು 'ಅಪ್ಪ ರೇವಣಸಿದ್ಧ' ಎಂದಿದ್ದಾನೆ. ಅಲ್ಲದೇ ಇದು ಗುರುವರ್ಗದ ಗುರುಗಳಿಗೆ ಸಂಬೋಧಿಸುವ ಪದವಾಗಿದೆ.

ಶಿವಶರಣ ಬಾಲಬೊಮ್ಮಣ್ಣ ತನ್ನ ವಚನವೊಂದರಲ್ಲಿ 'ಗುರುವಾಗಿ ಬಂದರಯ್ಯಾ ರೇವಣಸಿದ್ಧೇಶ್ವರ ದೇವರು'[38] ಎಂದು ಇನ್ನೂ ಸ್ಪಷ್ಟವಾಗಿ ಸಿದ್ಧರಾಮನ ವಚನಕ್ಕೆ ಪುಷ್ಟಿ ನೀಡುತ್ತಾನೆ. ಇವೆಲ್ಲಾ ಬಸವಕಾಲೀನ ವಚನಕಾರರು ಜಗದ್ಗುರು ರೇವಣಸಿದ್ಧರನ್ನು ಪ್ರಸಂಗಿಕವಾಗಿ ನೆನೆದು ಗೌರವ ತೋರಿದರೆ ಇನ್ನು ಬಸವೋತ್ತರ ಕಾಲಿನ ಶಿವಶರಣರ ವಚನಗಳಲ್ಲಿ ನಾವು ಅಪೂರ್ವತೆಯನ್ನು ಕಾಣಬಹುದಾಗಿದೆ.

ತೋಂಟದ ಸಿದ್ಧಲಿಂಗಯತಿಗಳು ವಿರಕ್ತ ಪರಂಪರೆಯ ಮುಖ್ಯವಾದ ಕೊಂಡಿ ಅವರೇ ಸ್ವತಃ ಗುರುವರ್ಗದ ಪೀಠಾಚಾರ್ಯರಾದ ಜಗದ್ಗುರು ರೇವಣಸಿದ್ಧರನ್ನು ಕುರಿತು ಹೀಗೆ ಬರೆದಿದ್ದಾರೆ:

***'ಶಿವನಲ್ಲಿಯೆ ಹುಟ್ಟಿ, ಶಿವನಲ್ಲಿಯೆ ಲಯವಾದ ರೇವಣಸಿದ್ಧೇಶ್ವರ***
***ಅನಾದಿ ಮುಕ್ತನಲ್ಲ, ಅವಾಂತರ ಮುಕ್ತರೆಂಬ***
***ಅಜ್ಞಾನಿಗಳಿಗೆ ನಾಯಕ ನರಕ ತಪ್ಪದು'***[39]

ಇಂದಿನ ವಿರಕ್ತಪರಂಪರೆಯ ಗುರುಗಳು ಈ ವಚನ ಪಚನಮಾಡಿಕೊಳ್ಳಲು ಕಚಗುಳಿಗೊಳಗಾಗುತ್ತಿದ್ದಾರೆ. ಇದು ದುರ್ದೈವದ ಸಂಗತಿಯಾಗಿದೆ. ಕ್ರಿ.ಶ. 17ನೇ ಶತಮಾನದ ಗುರುಸಿದ್ಧದೇವರು

***'ಚಂಗಣಗಿಲ ಮಂಟಪದ ರೇವಣಸಿದ್ಧೇಶ್ವರಂಗೆ ಬೋಧಿಸಿದರು***
***ನೋಡ ಅದೇ ಪ್ರಸಾದವನ್ನೇ ರೇವಣಸಿದ್ಧೇಶ್ವರನೆಂಬ***
***ದೇಶಿಕೇಂದ್ರನು ಜ್ಞಾನೋದಯರಾಗಿ ತಮ್ಮಡಿಗೆರಗಿ ಬಂದ***
***ಶಿಷ್ಯೋತ್ತಮ ಶಿವಶರಣರ್ಗೆ ಸ್ವಾನುಭವ ಸೂತ್ರದಿ***
***ಬೋಧಿಸುತ್ತಿರ್ದರು ನೋಡ'***[40]

ಜಗದ್ಗುರು ರೇವಣಸಿದ್ಧರನ್ನು ಇಲ್ಲಿ ಚಂಗಣಗಿಲ ಮಂಟಪದ ಕರ್ತೃವೆಂದು ದೇಶಿಕೇಂದ್ರವೆಂದು ಅಲ್ಲದೇ ಅವರ ಗುರುಶಿಷ್ಯ ಪರಂಪರೆ ನೆನೆದ ಸಂಗತಿ ವಿಶೇಷವೆನಿಸುವುದು. ಮುಮ್ಮಡಿ ಕಾರೇಂದ್ರ (ಕ್ರಿ.ಶ. 1700) ಈತ ಜಗದ್ಗುರು ರೇವಣಸಿದ್ಧರನ್ನು ಕುರಿತು ಇವರು ಶಿವನ ತತ್ಪುರುಷ ಮುಖದಿಂದ ಉದ್ಭವರಾಗಿ

ಮರ್ತ್ಯಲೋಕವನ್ನು ಪಾವನ ಮಾಡಿದರು.[41] ಎಂದಿದ್ದಾನಲ್ಲದೇ 'ವೀರಶೈವ ಮತೋದ್ಧಾರಕ'[42] ಎಂದು ಕೊಂಡಾಡಿದ್ದಾನೆ.

ಕಡಕೋಳ ಮಡಿವಾಳಪ್ಪ (ಕ್ರಿ.ಶ. 1780–1855)ನು ಜಗದ್ಗುರು ರೇವಣಸಿದ್ಧರು ನಾರದನ ವಿನಂತಿ ಮೇರೆಗೆ ಕೊಲ್ಲಿಪಾಕಿಯಲ್ಲಿ ಜನಿಸಿದರು. ಲೋಕ ಪಾವನಾರ್ಥವಾಗಿ ಎಂದೆನ್ನುತ್ತಾನೆ. ಬಯಸಿದವರಿಗೆ ತತ್ವೋಪದೇಶ ನೀಡಿದ ಅವರು ಖೇಚರಿಯ ಗಮನದಲ್ಲಿ ಸಂಚಾರ ಮಾಡುತ್ತಿದ್ದರು ಎಂದು ವಿವರಿಸಿದ್ದಾನೆ.[43] ಶಿಶುನಾಳದ ಸಂತ ಶರೀಫ ತನ್ನ ದಂಡಕವೊಂದರಲ್ಲಿ ಜಗದ್ಗುರು ರೇವಣಸಿದ್ಧರನ್ನು ನೆನೆದುಕೊಂಡಿದ್ದಾನೆ.[44] ಹೀಗೆ ಬಸವಾದಿ ಶಿವಶರಣರು ಹಾಗೂ ಬಸವೋತ್ತರ ಕಾಲೀನ ಶರಣರು ಜಗದ್ಗುರು ರೇವಣಸಿದ್ಧರ ಬಗ್ಗೆ ಅಪಾರ ಗೌರವ ಉಳ್ಳವರಾಗಿ ತಮ್ಮ ತಮ್ಮ ವಚನಗಳಲ್ಲಿ ಸಾಂದರ್ಭಿಕವಾಗಿ ಕೆಲವರು ನೆನೆದರೆ ಮತ್ತೆ ಕೆಲವರು ಅವರ ಸ್ತುತಿ ಚರಿತ್ರೆ ಬಿಚ್ಚಿಟ್ಟಿದ್ದಾರೆ.

**ಜಾನಪದಗಳಲ್ಲಿ ಜಗದ್ಗುರು ರೇವಣಸಿದ್ಧೇಶ್ವರರು**

ಸಾಮಾನ್ಯವಾಗಿ ಜಾನಪದ ಜನಸಾಮಾನ್ಯರ ಜೀವನಾಡಿ ಸಾಹಿತ್ಯದ ಗಂಗೋತ್ರಿ ಶ್ರೀಸಾಮಾನ್ಯರ ಭಕ್ತಿ–ಭಾವ ಮುಪ್ಪುರಿಗೊಂಡಿರುವ ಕಣಜವೇ ಜಾನಪದ. ಜನಪದರು ಭಯ–ಭಕ್ತಿಯಿಂದ ಜಗದ್ಗುರು ರೇವಣಸಿದ್ಧರನ್ನು ಕುರಿತು ಹಾಡಿದ ಬಗೆ ಹೀಗಿದೆ :

***ಜಗದ್ಗುರು ಆದಾವೋ ನೀನೆ***
***ಜಗವ್ಯಾಪಕ ಆದಾವ ನೀನೆ***
***ಅಗಣಿತ ಮಹಿಮಾ ನೀನೆ ರೇವಣಸಿದ್ಧನೊ'***[45]

ಈ ಪದ್ಯದಲ್ಲಿ ಜಗದ್ಗುರು, ಜಗವ್ಯಾಪಕ, ಅಗಣಿತ ಮಹಿಮಾ ಈ ಪದಗಳನ್ನು ಗಮನಿಸಬೇಕು. ಇದೇ ಪದ್ಯದ ಮುಂದುವರೆದ ಭಾಗದಲ್ಲಿ ಜ್ಞಾನದ ನಿಧಿ, ಪೂರ್ಣಬ್ರಹ್ಮ, ಮರಣರಹಿತ, ಶರಣ ರಕ್ಷಕ ಎಂದು ಜಗದ್ಗುರು ರೇವಣಸಿದ್ಧರನ್ನು ಕೊಂಡಾಡಿದ್ದಾರೆ.

***'ಗುರು ಇದ್ದರ ಇರಬೇಕು ಎಂತಾವನೋ? ತಮ್ಮಾ***
***ಜಗದ್ಗುರು ರೇವಣಸಿದ್ಧನ್ಹಾಂಗ ಅಂದಿನೋ'***[46]

ಜನಪದಗಳಲ್ಲಿ ಜಗದ್ಗುರು ರೇವಣಸಿದ್ಧರಿಗೆ ಸಂಬಂಧಿಸಿದ ಅನೇಕ ಘಟನೆಗಳು ಕಾಣಸಿಗುತ್ತವೆ. ಅವುಗಳಲ್ಲಿ ಮುದ್ದುಗೌಡ–ಸುಗ್ಗವ್ವೆಯರಿಗೆ ಸಿದ್ಧರಾಮೇಶ್ವರನ ಜನನ ಭವಿಷ್ಯ ನುಡಿದು ಅವರಿಗೆ ಆಶೀರ್ವದಿಸಿದ ಪ್ರಸಂಗ ಮಾರ್ಮಿಕವಾಗಿದೆ. ರೇವಣಸಿದ್ಧನಿಗೂ ರಂಭಾಪುರಿಪೀಠಕ್ಕೂ ಜಗದ್ಗುರು ಪದವಿಗೂ ಯಾವುದೇ ಸಂಬಂಧವಿಲ್ಲ ಎಂದು ಜನಪದರು ತಮ್ಮ ಸಾಹಿತ್ಯದಲ್ಲಿ ಈ ಎಲ್ಲ ಪ್ರಶ್ನೆಗಳಿಗೆ ಹೀಗೆ ಉತ್ತರಿಸಿದ್ದಾರೆ:

***ರಂಭಪುರದೊಳಗ ಗಂಭೀರ ಪೀಠದಲ್ಲೆನೋ***
***ಶಂಭುವನತಾರ ಗುರುರೇವಣಸಿದ್ಧ ಅಲ್ಲೇನೋ***
***ನಂಬಿದಂಥಾ ಭಕ್ತರನ ಸಲುವಾಗಿ ನೆನಯಲ್ಲಿಲ್ಲೇನೋ***
***ವೀರಶೈವ ಧರ್ಮಬಿತ್ತಿ ಬೆಳೆಯಲಿಲ್ಲೇನೋ***

***ಧರಿಯ ಒಳಗ ದುಷ್ಟಾ ತತ್ವ ಕೆಡಿಸಲಿಲ್ಲೇನೋ***
***ತಿರುಗಿ ತಿರುಗಿ ಶಿವನ ತತ್ವಾಸಾರಲಿಲ್ಲೇನೋ*** [47]

ಜನಪದ ಹಾಲುಮತ ಮಹಾಕಾವ್ಯದಲ್ಲಿ ಜಗದ್ಗುರುಗಳು ಭಿಕ್ಷಾಟನೆಗೆ ಹೋಗುವ ಪರಿಯನ್ನು ಅತ್ಯಂತ ಮಾರ್ಮಿಕವಾಗಿ ಹೇಳಲಾಗಿದೆ ಹಾರೂರ ಗುಂಡವ್ವ, ರಡ್ಡೇರ ನೀಲವ್ವನ ಮನಿಗೆ ಹೋಗಿ ಭಿಕ್ಷೆ ಕೇಳಿದರೆ ಅವರು ಯಾರು ಬಂದಿದ್ದಾರೆಂದು ಗುರುತು ಹಿಡಿಯದೇ ಕೈ ಕಾಲಿ ಇಲ್ಲಿ ಎಂದು ಮುಂದೆ ಕಳಿಸಿದರು. ಆಗ ಜಗದ್ಗುರು ಕುರುಬರ ಸಿದ್ಧವ್ವನ ಮನಿ ಮುಂದೆ ಬಂದಾಗ ಗುರುತು ಹಿಡಿದ ಆ ತಾಯಿ

***'ಸರ್ವಕುಲ ಈಡಿಯಾ ಬಾ***
***ನನ್ನ ಗುರುವ ರೇವಣಸಿದ್ಧನೇ'*** [48]

ಎಂದು ಅತ್ಯಾದರದಿಂದ ಸಾಷ್ಟಾಂಗವೆರಗಿ ಬರಮಾಡಿಕೊಂಡಳು ಆ ತಾಯಿಯ ಭಕ್ತಿಗೆ ಮೆಚ್ಚಿದ ರೇವಣಸಿದ್ಧರು ಹೀಗೆ ಹರಸಿದರು:

***'ನನಗೆ ಭಿಕ್ಷೆ ಕೊಟ್ಟಿದೆ ದೊಡ್ಡಿಯಾ ದೊಡ್ಡದಾಗಲೇ***
***ಒಂದಕೆರೆನಾಗಲೆ ಎರಡಕ ಹತ್ತನಾಗಲೇ***
***ಎರಡಕ ಹತ್ತನಾಗಲೆ ಹತ್ತಕ ಸಾವಿರಗಲೇ'*** [49]

ಮಡಿವಾಳನ ಪತ್ನಿ ನೀಲಮ್ಮಳನ ಜಾಣ್ಮೆ ಹಾಗೂ ಭಕ್ತಿ ಪರೀಕ್ಷೆ ಮಾಡಿದ ಕಥೆಯನ್ನು ಜಾನಪದದಲ್ಲಿ ಅತ್ಯಂತ ಮನೋಜ್ಞವಾಗಿ ಚಿತ್ರಿತಗೊಳಿಸಿದ್ದಾರೆ. ಜಗದ್ಗುರುವಾದರೂ ಜನರಿಂದ ದೂರ ಇರದೇ ಜನಸಾಮಾನ್ಯರ ನಡುವೆ ಇದ್ದು ಅವರ ಬೇಕು–ಬೇಡಗಳನ್ನು ಪೂರೈಸುತ್ತ ಜನಾನುರಾಗಿ ಜಗದ್ಗುರುವಾಗಿ, ಜಗವ್ಯಾಪಕ, ಜಗಭರಿತರಾಗಿ ಜಗದಾಚಾರ್ಯ ರೇವಣಸಿದ್ಧರು ಜನಮಾನಸದಲ್ಲಿ ನೆಲೆ ನಿಂತ ಬಗೆಯನ್ನು ಜನಪದರು ತಮ್ಮ ಪದ–ಪದ್ಯಗಳಲ್ಲಿ ಭಕ್ತಿ–ಭಾವದಿಂದ ಸೆರೆ ಹಿಡಿದಿದ್ದಾರೆ. ಇಂದಿನ ಪೂರ್ವಗ್ರಹ ಪೀಡಿತ ಸಂಶೋಧಕರಿಗೆ ಈ ಜಾನಪದಗಳೇ ಉತ್ತರ ರೂಪವಾಗಿ ನಿಲ್ಲುತ್ತವೆ.

**ಕನ್ನಡ ಕೃತಿಗಳಲ್ಲಿ ಜಗದ್ಗುರು ರೇವಣಸಿದ್ಧೇಶ್ವರರು**

ಕನ್ನಡ ಕೃತಿಗಳಲ್ಲಿ ಸಿಂಹಪಾಲುವುಳ್ಳ ಚಾರಿತ್ರ ಜಗದ್ಗುರು ರೇವಣಸಿದ್ಧರದಾಗಿದೆ. ಇವರನ್ನು ಕುರಿತು ಮೊದಲು ಕೃತಿ ರಚಿಸಿದವ ಹರಿಹರ. ಆತನ ರೇವಣಸಿದ್ಧೇಶ್ವರ ರಗಳೆ ಇಲ್ಲಿ ಐದು ಸ್ಥಲಗಳನ್ನು ಮಾಡಿಕೊಂಡು ಕೊಲ್ಲಿಪಾಕಿಯ ಶಿವಲಿಂಗದಲ್ಲಿ ಜನಿಸಿದ ರೇವಣಸಿದ್ಧರು ವೀರಶೈವಧರ್ಮ, ಸಂಸ್ಕೃತಿ ಸಂವರ್ಧನೆಗಾಗಿ ಸಂಚಾರಕೈಗೊಂಡು, ಅನೇಕ ಮಹಿಮೆಗಳನ್ನು ಮೆರೆದು ಮತ್ತೇ ಅದೇ ಲಿಂಗದಲ್ಲಿ ಐಕ್ಯವಾಗಿರುವುದನ್ನು ಕಟೆದು ನಿಲ್ಲಿಸಿದ್ದಾನೆ. ಜಗದ್ಗುರು ರೇವಣಸಿದ್ಧರನ್ನೇ ಮುಖ್ಯವಾಗಿರಿಸಿಕೊಂಡು ಕಾವ್ಯ ಹೆಣೆದ ಪ್ರಮುಖ ಗ್ರಂಥಗಳೆಂದರೆ ಚನ್ನಬಸವನ 'ರೇವಣ ಸಾಂಗತ್ಯ', ಚತುರ್ಮುಖ ಬೊಮ್ಮರಸನ 'ರೇವಣಸಿದ್ದೇಶ್ವರ ಪುರಾಣ', ಮಲ್ಲಣ್ಣನ 'ರೇವಣಸಿದ್ಧೇಶ್ವರ ಕಾವ್ಯ' ಚೆನ್ನಬಸವ ಶಾಸ್ತ್ರಿಗಳ 'ಹಾಲುಮತ ಪುರಾಣ' ಈ ಮುಂತಾದವು.

ಇನ್ನು ಪ್ರಾಸಂಗಿಕವಾಗಿ ಜಗದ್ಗುರು ರೇವಣಸಿದ್ಧರನ್ನು ಕುರಿತು ರಚಿಸಿ ಕೃತಿಗಳೆಂದರೆ ರಾಘವಾಂಕನ 'ಸಿದ್ಧರಾಮ ಚಾರಿತ್ರ್ಯ' ವಿರೂಪಾಕ್ಷ ಪಂಡಿತನ 'ಚನ್ನಬಸವ ಪುರಾಣ', ಸಿದ್ಧನಂಜೇಶನ 'ಗುರುರಾಜ

ಚಾರಿತ್ರ್ಯ', ಷಡಕ್ಷರ ಕವಿಯ 'ರಾಜಶೇಖರ ವಿಳಾಸ' ಶಾಂತಲಿಂಗದೇಶಕರ 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ', ಗುರುಲಿಂಗ ದೇಶಿಕರ 'ಲಿಂಗಪುರಾಣ', ಸಂಪಾದನೆಯ ಪರ್ವತೇಶನ 'ಚತುರಾಚಾರ್ಯ ಚಾರಿತ್ರ', ರಾಚಪ್ಪಯ್ಯನ 'ಪ್ರಭುಚರಿತೆ' ಈ ಗ್ರಂಥಗಳಲ್ಲದೇ ನೀಲಕಂಠಾಚಾರ್ಯನ 'ಆರಾಧ್ಯ ಚಾರಿತ್ರ', ಕಾಶಿಕಾಂಡದ ಚೆನ್ನವೀರನ 'ಜಂಗಮ ತಾರಾವಳಿ', ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತ ಪುರಾಣ', ಮುರಿಗೆ ದೇಶಿಕೇಂದ್ರನ 'ಹಮ್ಮೀರ ಕಾವ್ಯ', ನಂಜುಂಡದೇವನ 'ಭೈರವೇಶ್ವರ ಕಾವ್ಯ', ಬಸವಲಿಂಗದೇಶಿಕರ 'ಶಿವಾಧಿಕ್ಯ ಪುರಾಣ', ದೇವಕವಿಯ 'ಮರುಳಸಿದ್ಧಕಾವ್ಯ', ಉತ್ತರದೇಶದ ಬಸವಲಿಂಗರ 'ಬಸವೇಶ್ವರ ಪುರಾಣ ಕಥಾಸಾಗರ', ಗರಣಿಯ ಬಸವಲಿಂಗರ 'ಬಸವೇಶ್ವರನ ಕಾವ್ಯ', ಚನ್ನಬಸವ ಕವಿಯ 'ರೇವಣ ಸಾಂಗತ್ಯ'. ವಿರಕ್ತ ತೋಂಟದಾರ್ಯನ 'ಪಾಲ್ಕುರಿಕೆ ಸೋಮೇಶ್ವರ ಪುರಾಣಂ', ಸಿದ್ಧೇಶ 'ತಗರ ಪವಾಡ', ಕವಿ ರೇವಣಸಿದ್ಧನ 'ಮರುಳಸಿದ್ಧದೇವರ ಚರಿತ್ರೆ', ಕವಿಮರುಳಸಿದ್ಧನ 'ಗುರುಲಿಂಗಜಂಗಮ ಚಾರಿತ್ರ', ದೇವಚಂದ್ರನ 'ರಾಜಾವಳಿ ಕಥಾಸಾರ', ರಾಮಗಿರಿಯ ನಾಗಭೂಷಣ 'ಮರುಳಸಿದ್ಧೇಶ್ವರ ಸಾಂಗತ್ಯ', ಚನ್ನಪ್ಪಕವಿಯ 'ಶರಣ ಲೀಲಾಮೃತ' ತಿಲಕಪುರದ ಸೋಮ 'ಚತುರಾಚಾರ್ಯ ಪ್ರಬಂಧ', ಚನ್ನಬಸವೇಶ್ವರ ದೇವರ 'ಮಠಸ್ಥಲ ಪೌರಣ' ಅಲ್ಲದೇ ಪಮ್ಮಿಶೆಟ್ಟಿ, ಶಾಂತನಿರಂಜನ, ಸೆಜ್ಜೆಯ ಸಿದ್ಧಲಿಂಗ, ಪಂಡಿತ ಮಲ್ಲಿಕಾರ್ಜುನ ಇವರೆಲ್ಲ ಸಾಂದರ್ಭಿಕವಾಗಿ ತಮ್ಮ ಕೃತಿಗಳಲ್ಲಿ ಜಗದ್ಗುರು ರೇವಣಸಿದ್ಧರ ಇತಿಹಾಸ ಮತ್ತೆ ಕೆಲವರು ಸ್ತುತಿಗೈದಿದ್ದು ಕಂಡು ಬರುತ್ತದೆ.

ಕನ್ನಡದಲ್ಲಿ ರಚನೆಗೊಂಡ ಕೃತಿಗಳೆಲ್ಲವನ್ನು ಸಮೀಕ್ಷೆ ಮಾಡಿದಾಗ ಜಗದ್ಗುರು ರೇವಣಸಿದ್ಧರಿಗೆ ಸಂಬಂಧಿಸಿದ ಘಟನೆಗಳನ್ನು ತಿಳಿದುಕೊಳ್ಳಬಹುದು. ಅವುಗಳೆಂದರೆ ಕೊಲ್ಲಿಪಾಕಿಯಲ್ಲಿ ಜನನ, ಕಂಚಿಯಲ್ಲಿ ಭಕ್ತರ ರಕ್ಷಣೆ, ಜಮ್ಮೂರು ಶಿವಾಲಯ–ಬನದೇವಿಯರಿಗೆ ಕೃಷಿ ಪಾಠ, ಮಾಸನೂರು ಶಿವಾಲಯ, ರಾಕ್ಷಸ ಮಿಥುನ ಸಂಹಾರ ಅವುಗಳಿಂದ ಖಡ್ಗ ತಯಾರಿಸಿ ಒಂದು ಮಡುವಿನಲ್ಲಿ ಇನ್ನೊಂದನ್ನು ವಿಕ್ರಮಾದಿತ್ಯನಿಗೆ ಕೊಡುಗೆ, ಕಲ್ಯಾಣದ ಗಾಣದ ಕಲ್ಲಿಶೆಟ್ಟಿ ದಂಪತಿಗಳಿಗೆ ಕಣ್ಣು ನೀಡಿದ್ದು, ಮಂಗಳವಾಡದಲ್ಲಿ ಬಿಜ್ಜಳನ ಗರ್ವಭಂಗ, ಬಸವಣ್ಣನಿಗೆ ಭಸ್ಮ ನೀಡಿ ಆಶೀರ್ವದಿಸಿದರು, ಕೊಲ್ಲಾಪುರದಲ್ಲಿ ಗೋರಕ್ಷಕನ ಗರ್ವಭಂಗ ಆತನಿಗೆ ವೀರಶೈವ ಉಪದೇಶ, ಬಿಜ್ಜಳ ಕರ್ಪರ ಜೋಗಿಯಿಂದ 12ಸಾವಿರ ಕನ್ಯೆಯರ ಬಲಿ ತಪ್ಪಿಸಿದ್ದು, ರಾಜೇಂದ್ರ ಚೋಳ, ವಿಜಯೇಂದ್ರ ಚೋಳ, ಚೇರ, ಮಲೆಯಾಳ, ಗೌಳ, ಗುರ್ಜರ, ನೇಪಾಳ ರಾಜರಿಗೆ ಆಶೀರ್ವದಿಸಿದರು, ಮಂಗಳವಾಡ, ಕಲ್ಯಾಣ, ಚೋಳರಾಜ್ಯದ ವಿವಿದೆಡೆಗಳಲ್ಲಿ ಕೆರೆ ನಿರ್ಮಾಣ ಮಾಡಿದರು, ಚಂಗಣಿಗಿಲ ಮಂಟಪ ನಿರ್ಮಾಣ ಆಧ್ಯಾತ್ಮಿಕ ಚರ್ಚೆ, ಹರಿಗೋಲಿನ ಸಹಾಯವಿಲ್ಲದೇ ತುಂಬಿದ ತೊರೆ ದಾಟಿದರು, ಕಂಥೆ ಮೇಲೆ ಕುಳಿತು ನದಿ ದಾಟಿದರು ಇದಲ್ಲದೆ ಇನ್ನೂ ಸಿದ್ಧರಾಮೇಶ್ವರನ ಜನನ ಭವಿಷ್ಯ ನುಡಿದದ್ದು, ಶಾಂತಮುತ್ತಯ್ಯನಿಗೆ ಇಷ್ಟಲಿಂಗ ಪ್ರದಾನ ಮಾಡಿದ ಪ್ರಸಂಗ, ಕುರಿಗಳ ಬದುಕಿಸಿ ಹಾಲುಮತದವರಿಗೆ ಗುರುವಾದ ಬಗೆ, ಅವರ ಜೀವನ ಸಾಧನೆ, ಲಿಂಗೈಕ್ಯರಾದುದು ಮುಂತಾದ ಸಂಗತಿಗಳು ಕನ್ನಡ ಸಾಹಿತ್ಯದಿಂದ ತಿಳಿದು ಬರುತ್ತದೆ.

ಹರಿಹರನಲ್ಲಿ ಹುಟ್ಟಿದ ಚರಿತ್ರೆ ಚತುರ್ಮುಖ ಬೊಮ್ಮರಸನಲ್ಲಿ ವಿರಾಟ ಸ್ವರೂಪ ತಾಳುತ್ತದೆ. ಲಿಂಗಪುರಾಣ ಹಾಗೂ ರೇವಣಸಿದ್ಧೇಶ್ವರ ಕಾವ್ಯದಲ್ಲಿ ಬಸವಣ್ಣನಿಗೆ ಹರಸಿದ ಐತಿಹಾಸಿಕ ಸಂಗತಿ ವಿಶೇಷವೆನಿಸುತ್ತವೆ. ಹಾಲುಮತಪುರಾಣದಲ್ಲಂತೂ ಜಗದ್ಗುರುಗಳ ಮಹತಿ ಚಿತ್ರಿತವಾಗಿದೆ. ಶಿವಸಿದ್ಧ

ಬೀರೇಶನಿಗೆ ಹರಸಿದ ಜಗದ್ಗುರುಗಳು "ಗುರುಶಿಷ್ಯರು ಸಂತಸದಿಂದ ಬಾಳಿ"ರೆಂದು ಆಶೀರ್ವದಿಸಿ ರಂಭಾಪುರೀ ಪೀಠಕ್ಕೆ ಬಂದು ರುದ್ರಮುನಿಗಳಿಗೆ ಪಟ್ಟಾಭಿಷೇಕ ಮಾಡಿ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ದೇಹಧಾರಿಗಳಾಗಿ ಐಕ್ಯವಾದ ಪ್ರಸಂಗ ಅತ್ಯಂತ ಮನೋಜ್ಞವಾಗಿ ಮೂಡಿಬಂದಿದೆ.

**ಉಪಸಂಹಾರ**

ಆದಿ ಜಗದ್ಗುರು ರೇಣುಕಾದಿ ಪಂಚ ಆಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟ ವೀರಶೈವಧರ್ಮಕ್ಕೆ ಕಣ್ಣಾಗಿ ಬಂದವರು ರೇವಣಸಿದ್ಧರು. ಬಸವಾದಿ ಶರಣರ ಹಿರಿಯ ಸಮಕಾಲೀನರಾದ ಜಗದ್ಗುರು ರೇವಣಸಿದ್ಧರು. ಭೂಲೋಕದ ಜನರನ್ನು ಉದ್ಧಾರ ಮಾಡುವ ಉದ್ಯೋಗ ಕೈಗೊಂಡು ಬಂದವರು. ಶಿಷ್ಟರ ರಕ್ಷಣೆ ದುಷ್ಟನಿಗ್ರಹ ಮಾಡುತ್ತ ಅಚಲನಿಷ್ಠೆ, ಅದಮ್ಯ ಕಲಿತನ ಅಘಟಿತ ಘಟನೆಗಳು ರೂವಾರಿ ಎನಿಸಿದರು. ಕವಿ ಚತುರ್ಮುಖ ಬೊಮ್ಮರಸ ಸಕಲ ಜೀವ ಜಂತುಗಳನ್ನುದ್ಧರಿಸಿ ಶಿವತತ್ವವನ್ನು ಭಕ್ತಗುಣಕ್ಕೆ ಉಪದೇಶ ನೀಡಿದರು. ರಾಜ ಮಹಾರಾಜರಿಗೆ ಕುಲಗುರು–ರಾಜಗುರುಗಳಾಗಿ, ಹದಿನೆಂಟು ಜಾತಿಯವರಿಗೆ ಲಿಂಗ ನೀಡಿ, ಬಡವ–ಬಲ್ಲಿದ, ಮೇಲು–ಕೀಳು, ಪಂಡಿತ–ಪಾಮರನೆನ್ನದೆ ಗುಡಿಸಿಲಿನಿಂದ ಗುರುಮನೆ–ಅರಮನೆಗೆ ಸಾಗಿ ಸಕಲರನ್ನು ಸಮಾನತೆಯಿಂದ ಕಂಡು ಆಶೀರ್ವದಿಸಿ ಕೊನೆಗೆ ಕೊಲ್ಲಿಪಾಕಿಯ ಸೋಮೇಶ್ವರನಲ್ಲಿ ಐಕ್ಯರಾದರು. ಹೀಗೆ ಶಾಸನ, ವಚನ, ಜಾನಪದ, ಕನ್ನಡ ಸಾಹಿತ್ಯ ಕೃತಿಗಳಲ್ಲಿ ಪುರಾಣಗಳಲ್ಲಿ ಮಡುಗಟ್ಟಿದ ಜಗದ್ಗುರುವಿನ ಚರಿತ್ರೆಯನ್ನು ಮನಗಾಣಬಹುದು.

**ಕೊನೆಟಿಪ್ಪಣಿಗಳು**

1. ವಿದ್ಯಾಶಂಕರ ಎಸ್. (ಸಂ) (2001). ಸಿದ್ಧರಾಮೇಶ್ವರ ವಚನ ಸಂಪುಟ– ಸ.ವ.ಸಂ.4. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ವ.ಸಂ. 1701.
2. ರಾಜೂರು ವೀರಣ್ಣ (ಸಂ.) (2001). ಶಿವಶರಣೆಯೆ ವಚನಸಂಪುಟ, ಸ.ವ.ಸಂ.5. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ವ.ಸಂ 37
3. ಅದೇ. ವ.ಸಂ. 378
4. ಸ್ವಾಯಂಭುವಾಗಮ, ಪಂಚಾರಾಧ್ಯೋತ್ಪತ್ತಿ (9ನೇ ಪಟಲ), 10.
5. ಗುರುವಂಶಕಾವ್ಯ 33.
6. ವೀರಾಗಮ, ವೀರಮಾಹೇಶ್ವರ ಸ್ವರೂಪ ಪಟಲ–II.4
7. Times of India (Jun 23, 2012), Bengaluru.
8. ಕಲಬುರ್ಗಿ ಎಂ. ಎಂ (1999). ಹರಿಹರನ ರೇವಣಸಿದ್ದೇಶ್ವರದೇವರ ರಗಳೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ಪಾರಮೇಶ್ವರಾಗಮ 1–42
10. ನೀಲಕಂಠಶಿವಾಚಾರ್ಯನ ಕ್ರಿಯಾಸಾರ. ಭಾಗ–1
11. ಸುಂಕಪುರ ಎಂ. ಎಸ್. (1980). ಮಲ್ಲಣ್ಣ ಕವಿಯ ರೇವಣಸಿದ್ಧೇಶ್ವರ ಕಾವ್ಯ 1–19, ಶ್ರೀ ಮುರುಘಾಮಠ, ಧಾರವಾಡ.
12. ಅದೇ.

13. ಬಸವಾರಾಧ್ಯ ಎನ್. (1986). ಸಂಪಾದನೆಯ ಪರ್ವತೇಶ : ಚತುರಾಚಾರ್ಯ ಚಾರಿತ್ರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
14. ನೇಗಿನಹಾಳ ಎಂ. ಬಿ (ಸಂ.) (2000). ರಾಘವಾಂಕ: ಸಿದ್ಧರಾಮ ಚಾರಿತ್ರ. ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.
15. ಸರೂರು ತಾ. ಮುದ್ದೇಬಿಹಾಳ, ಮುಖ್ಯಕೇಂದ್ರ. ಈಗ ಎಲ್ಲೆಲ್ಲಿ ಹಾಲುಮತದ ದೇವಸ್ಥಾನಗಳಿವೆಯೋ ಅಲ್ಲಲ್ಲಿ ರೇವಣಸಿದ್ಧರ ಲಿಂಗೋದ್ಭವ ಮೂರ್ತಿ ಕಾಣಸಿಗುತ್ತವೆ.
16. ಪೂರ್ವೋಕ್ತ–8
17. ವಾಲಿ ಎ.ಸಿ. (2012). ಸಂಜೀವಿನಿ. ಕಿರಣ ದರ್ಶನ ಪ್ರಕಾಶನ; ಭಂಡಿವಾಡ.. ಈ ಪುಸ್ತಕಕ್ಕೆ ಬರೆದ ಸಂದೇಶದ ಬರಹದಲ್ಲಿ.
18. ಮಹಾರಾಷ್ಟ್ರದ ಕನ್ನಡ ಶಾಸನಗಳು. (2001). ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ
19. ವಾಲಿ. ಎ.ಸಿ. (2010). ಚತುರಾಚಾರ್ಯ ಚಾರಿತ್ರ : ಒಂದು ಅಧ್ಯಯನ. ಅಪ್ರಕಟಿತ ಪಿ.ಎಚ್‌ಡಿ ಮಹಾಪ್ರಬಂಧ, ಪುಟ 286
20. SII XV, 55
21. ಪೂರ್ವೋಕ್ತ–19, ಪುಟ 287
22. ಪೂರ್ವೋಕ್ತ–11 ಪು.287–288
23. ಅದೇ. ಪು. 289
24. ಚನ್ನಮಲ್ಲಿಕಾರ್ಜುನ (1958). ವೀರಶೈವ ಪಂಚಾಚಾರ್ಯ ಚರಿತ್ರೆ. (ಶ್ರೀ ರೇವಣಸಿದ್ದರು, ಬ್ಯಾಡಗಿ) ಶ್ರೀ ನಿರಂಜನ ಚನ್ನಬಸಚವ ಸ್ವಾಮಿಗಳವರು ಮುಪ್ಪಿನಸ್ವಾಮಿ ವೀರಕ್ತ ಮಠ, ಬ್ಯಾಡಗಿ. ಪು327
25. ಪೂರ್ವೋಕ್ತ–20, ಪು. 343
26. ನಾಗರಾಜ ಎಂ.ಜಿ. (2009). ವೀರಶೈವ ಆಕರಗಳು. . ಶ್ರೀ ಮದ್ರಂಭಾಪುರಿ ಪೀಠ, ಪ್ರಸಾರಂಗ ಬಾಳೆಹೊನ್ನೂರು. ಪು250
27. ಪೂರ್ವೋಕ್ತ–19, ಪು. 287.
28. ಇ.ಅ.ಸಂ 6–7 ಮೈಸೂರು ವಿಶ್ವವಿದ್ಯಾಲಯ
29. ತಮಿಳುನಾಡಿನ ಕನ್ನಡ ಶಾಸನಗಳು. (2000). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
30. ವಾಲಿ ಎ.ಸಿ. (2012). ಸಂಜೀವಿನಿ. ಕಿರಣ ದರ್ಶನ ಪ್ರಕಾಶನ; ಭಂಡಿವಾಡ.. ಪು. 20
31. ಕಲಬುರ್ಗಿ. (2001). ಸಂಕೀರ್ಣ ವ.ಸಂ–1. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ವ.ಸಂ. 275 ಪು. 319.
32. ಅದೇ. ವ.276, ಪು. 319
33. ಹಿರೇಮಠ. (2001). ಸಂಕೀರ್ಣ ವಚನ ಸಂಪುಟ–4. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ವ 29, ಪು. 351.
34. ಅದೇ. ವ 27, ಪು. 455
35. ಮಲ್ಲಾಪುರ. (2001). ಚೆನ್ನಬಸವಣ್ಣನವರ ವಚನ ಸಂಪುಟ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವ 247, ಪು. 370

36. ಪೂರ್ವೋಕ್ತ–2, ಪು. 57
37. ಪೂರ್ವೋಕ್ತ–1, ವ 1746, ಪು. 497
38. ಪೂರ್ವೋಕ್ತ–33,
39. ಶಿವಣ್ಣ. (2001). ಸಂಕೀರ್ಣ ವಚನ ಸಂಪುಟ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ವ.24, ಪು. 30.
40. ಅದೇ. ವ.709, ಪು. 399
41. ಪೂರ್ವೋಕ್ತ–1, ಪು. 466
42. ಅದೇ. ಪು. 467
43. ಕಡಕೋಳ ಮಡಿವಾಳೇಶ್ವರರ ಪದಗಳು
44. ಶಿಶುನಾಳ ಶರೀಫರ ತತ್ವಪದಗಳು
45. ಕಾಡೆ ಜಿ.ಬಿ (ಸಂ.). (1973). ಕಾಡಹೂಗಳು. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
46. ಅದೇ.
47. ಅದೇ.
48. ಶಕುಂತಲಾ ಗೋಪಶೆಟ್ಟಿ. (2006). ರೇವಣಸಿದ್ಧ : ಒಂದು ಅಧ್ಯಯನ, ಅಪ್ರಕಟಿತ ಪಿ.ಎಚ್‌ಡಿ ಮಹಾಪ್ರಬಂಧ, ಪು. 300
49. ಅದೇ. ಪು. 301